# ಹಂಪಿ ಟೈಮ್ಸ್
HAMPI TIMES
ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA
epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026




Good Opportunity for Branding
1,20,000+
Digital E-PAPER READERS
No.1 HAMPI TIMES LEADING PRINT & DIGITAL District News Paper
Call Us for Advertisements: 9448633038



ಸಂಪುಟ:02 • ಸಂಚಿಕೆ: 230 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 18.03.2025 • ಮಂಗಳವಾರ • ಪುಟ:04 • ಬೆಲೆ:2
Volume:02 • Issue: 230 • PRGI No:KARKAN/2023/88055 • VIJAYANAGARA • 18.03.2025 • Tuesday • Page:04 • Rs:2





## ದೇವಾಲಯ ದರ್ಶನ

ಹಂಪಿ ಶ್ರೀ ವಿರೂಪಾಕ್ಷೇಶ್ವರ ದರ್ಶನ

ನಿತ್ಯ ಅಭಿಷೇಕ ಸಮಯ
ಬೆಳಿಗ್ಗೆ: 6:30, 10:30 ಸಂಜೆ 6:30ಕ್ಕೆ

-: ದರ್ಶನ ಸಮಯ :-
ಬೆಳಿಗ್ಗೆ 6.30 ರಿಂದ ಮಧ್ಯಾಹ್ನ 1.15ರವರೆಗೆ
ಮಧ್ಯಾಹ್ನ 3 ರಿಂದ ರಾತ್ರಿ 7.30ರವರೆಗೆ

## ಆನಂದ ಬಾಣ





ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನಪತ್ರಿಕೆ
SSLC ವಿದ್ಯಾರ್ಥಿಗಳಿಗಾಗಿ
ಹೈಸ್ಕೋರ್ ಮತ್ತು ಸರಳ ಅಭ್ಯಾಸಕ್ಕೆ ತಜ್ಞ ಶಿಕ್ಷಕರಿಂದ ಸುಲಭ ಅಂಶಗಳು ನಿಮ್ಮ ಹಂಪಿ ಟೈಮ್ಸ್ ದಿನಪತ್ರಿಕೆಯಲ್ಲಿ
scan to read epaper
9 ಜುಲೈ 2024 ರಿಂದ ಪ್ರತಿದಿನ
ನಿಮ್ಮ ಮೊಬೈಲ್‌ನಲ್ಲಿ ಸ್ಕ್ಯಾನ್ ಮಾಡಿ ಇನ್ಸ್ಟಾಲ್ ಮಾಡಿಕೊಳ್ಳಿ!


# ಕಲಾವಿದರಿಗೆ ಕಲೆಯೇ ಜೀವಾಳ

### ಚಿಂದೋಡಿ ಶ್ರೀಕಂಠೇಶ ಹೇಳಿಕೆ | ಕೆ.ಬಿ.ಆರ್ ಡ್ರಾಮ ಕಂಪನಿಗೆ ಶತಮಾನೋತ್ಸವ ಸಂಭ್ರಮ

### ಕಲಾಪೋಷಕರೇ ಅನ್ನದಾತರು | ಒಂದೇ ಕುಟುಂಬದ ಒಡೆತನದ ನಾಟಕ ಕಂಪನಿ ಎಂಬುದು ಹೆಗ್ಗಳಿಕೆ



■ ಹಂಪಿ ಟೈಮ್ಸ್ ಕೊಟ್ಟೂರು

ಕರ್ನಾಟಕವಷ್ಟೇ ಅಲ್ಲ. ಇಡೀ ಭಾರತ ಹಾಗೂ ವಿಶ್ವದಲ್ಲಿಯೇ ಒಂದೇ ಕುಟುಂಬದ ಒಡೆತನದಲ್ಲಿ ಕೆ.ಬಿ.ಆರ್ ಡ್ರಾಮಾ ಕಂಪನಿ 100 ವರ್ಷಗಳ ಹೊಸ್ತಿಲಲ್ಲಿದೆ. ಇದು ನಾಟಕ ಕ್ಷೇತ್ರದಲ್ಲಿ ದಾಖಲೆ ನಿರ್ಮಿಸಿದೆ ಎಂದು ನಾಟಕ ಕಂಪನಿಯ ಮಾಲೀಕ ಚಿಂದೋಡಿ ಶ್ರೀಕಂಠೇಶ ಹೇಳಿದರು.

ಶ್ರೀ ಗುರು ಕೊಟ್ಟೂರೇಶ್ವರ ಜಾತ್ರೆ ಹಿನ್ನೆಲೆ ಕೊಟ್ಟೂರಿ ನಲ್ಲಿ ಬೀಡುಬಿಟ್ಟಿರುವ ಕೆ.ಬಿ.ಆರ್ ನಾಟಕ ಕಂಪನಿ ಚಿಂದೋಡಿ ವಿಜಯ ಕುಮಾರ ತಾಯಿ 'ಅಂಜಲಿ ಶ್ರೀಕಂಠೇಶ" ಹೆಸರಲ್ಲಿ ಪ್ರಶಸ್ತಿ ನೀಡುತ್ತಿದ್ದು, ಭಾನುವಾರ ರಾತ್ರಿ "ಸಿಕ್ರೆ ನಿನ್ನಂಥಾಕಿ ಸಿಗಬೇಕು" ನಾಟಕ ವೇಳೆ, ಪ್ರಸ್ತುತ ಚಿತ್ತರಗಿ ನಾಟಕ ಕಂಪನಿಯ ಹಿರಿಯ ಕಲಾವಿದ ಮಹಾರುದ್ರಾಚಾರ ಅವರಿಗೆ ಪ್ರಶಸ್ತಿ ಪತ್ರ ಹಾಗೂ 5 ಸಾವಿರ ರೂ. ನಗದು ನೀಡಿ ಸನ್ಮಾನಿಸಿದರು.

1928ರಲ್ಲಿ ಕೊಟ್ಟೂರನಲ್ಲಿ ಕೊಟ್ಟೂರೇಶ್ವರ ಸ್ವಾಮಿ ಮಹಾತ್ಮೆ ನಾಟಕ ಪ್ರದರ್ಶನದ ಮೂಲಕ ಈ ಕೆ.ಬಿ.ಆರ್. ನಾಟಕ ಕಂಪನಿ ಆರಂಭವಾಯಿತು. ಅಲ್ಲಿಂದ ಕಲೆಗಾಗಿ ನಾವು. ನಮಗಾಗಿ ಕಲೆ. ಕಲೆಯೇ ನಮ್ಮೆಲ್ಲರ ಉಸಿರಾಗಿಸಿಕೊಂಡು ನಿರಂತರವಾಗಿ ಕಂಪನಿ ಉತ್ತಮ ಸಂದೇಶ. ಅಭಿರುಚಿಯ ನಾಟಕಗಳನ್ನು ಪ್ರದರ್ಶಿಸುತ್ತ ನಿಮ್ಮೆಲ್ಲರ ಆಶೀರ್ವಾದ ದಿಂದ ಮುನ್ನಡೆಯುತ್ತ ಬಂದಿದೆ ಎಂದರು.

> ಕೆ.ಬಿ.ಆರ್. ನಾಟಕ ಕಂಪನಿಯ 'ಸಿಕ್ರ ನಿನ್ನಂಥಾಕಿ ಸಿಗಬೇಕು" ನಾಟಕ ಹಾಸ್ಯದ ಜೊತೆಗೆ ಕಣ್ಣಾಲೆಗಳನ್ನು ಒದ್ದೆಯಾಗಿಸುವಂತಹ ಕೌಟುಂಬಿಕ ಕಥೆಯ ನಾಟಕ, ಈ ನಾಟಕದ ಕಲಾವಿದರ ಅಭಿನಯ ಕಲಾಭಿಮಾನಿಗಳ ಹೃದಯವನ್ನು ಸ್ಪರ್ಶಿಸುತ್ತೆ. ಇಂತಹ ನಾಟಕವನ್ನು ಕಲಾಭಿಮಾನಿಗಳು ನೋಡುವಂತಹದ್ದು ಅತ್ಯಂತ ಅವಶ್ಯಕ.
>
> – ಕಲಾಭಿಮಾನಿಗಳು, ಕೊಟ್ಟೂರು.

ನಮ್ಮ ಕಂಪನಿಯಲ್ಲಿ ಸಿನಿಮಾ ರಂಗದ ಬಹುತೇಕ ಕಲಾವಿದರು ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಅಭಿನಯಿಸುತ್ತಲೇ ಇದ್ದು. ಅನೇಕ ಕಲಾವಿದರು ನಮ್ಮಲ್ಲಿ ಬದುಕು ರೂಪಿಸಿಕೊಂಡಿದ್ದಾರೆ. ಇದರಲ್ಲಿ ನನ್ನ ಮಕ್ಕಳು. ಸೊಸೆಯಂದಿರು. ಮೊಮ್ಮಕ್ಕಳು ಸೇರಿದಂತೆ ಒಂದು ಕುಟುಂಬ ಒಡೆತನದ ಕಂಪನಿ ಎಂದೇಳಲು ಹೆಮ್ಮೆಯಾಗುತ್ತಿದೆ ಎಂದರು.

ಸನ್ಮಾನ ಸ್ವೀಕರಿಸಿದ ಮಹಾರುದ್ರಾಚಾರಿ.ಕೆ.ಬಿ.ಆರ್ ಕಂಪನಿ ಮಾಲೀಕರು ಕಲಾವಿದರ ಮೇಲೆ ತೋರುತ್ತಿದ್ದ ಪ್ರೀತಿ. ಪ್ರೋತ್ಸಾಹವನ್ನು ನೆನೆದು ಭಾವುಕರಾದರು.

ಚಿಂದೋಡಿ ವಿಜಯಕುಮಾರ್. ಎನ್.ವಿ. ರಮಾ. ಸಿ.ವಿ. ಹೇಮಾ. ಸಿ.ವಿ. ದೀಪಾ. ಮಹಾಂತೇಶ ತಾಳಿಕೋಟೆ. ಕಾಂತ ಪಾಟೇಲ್. ರಾಘವೇಂದ್ರ ಬೆಂಗಳೂರು ಹಾಗೂ ಕಂಪನಿಯ ಕಲಾವಿದರಿದ್ದರು.

# ಪಡಿತರದಾರರಿಗೆ ನಗದು ಬದಲು ಧಾನ್ಯ ವಿತರಣೆ

■ ಹಂಪಿ ಟೈಮ್ಸ್ ಹೊಸಪೇಟೆ



ಪಿಹೆಚ್‌ಹೆಚ್ (ಬಿಪಿಎಲ್) ಪಡಿತರ ಚೀಟಿಯಲ್ಲಿನ ಪ್ರತಿ ಫಲಾನುಭವಿಗೆ ಮಾರ್ಚ್ ಮಾಹೆಯ ಆಹಾರ ಹಂಚಿಕೆಯೊಂದಿಗೆ ಫೆಬ್ರವರಿ ಮಾಹೆಗೆ ಪ್ರತಿ ಫಲಾನುಭವಿಗೆ ನೀಡಬೇಕಾಗಿದ್ದ 5 ಕೆಜಿ ಸೇರಿಸಿ ಮಾರ್ಚ್ ಮಾಹೆಯಲ್ಲಿ ಪ್ರತಿ ಫಲಾನುಭವಿಗೆ ಒಟ್ಟು 15 ಕೆಜಿ ಅಕ್ಕಿ ವಿತರಿಸಲಾಗುವುದು ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ತಿಳಿಸಿದ್ದಾರೆ.

ಸಾರ್ವಜನಿಕ ವಿತರಣಾ ಪದ್ದತಿಯಡಿ ಆದ್ಯತಾ ಪಡಿತರ ಚೀಟಿಯ (ಅಂತ್ಯೋದಯ, ಬಿಪಿಎಲ್) ಫಲಾನುಭವಿಗಳಿಗೆ ರಾಷ್ಟೀಯ ಅಹಾರ ಭದ್ರತಾ ಕಾಯ್ದೆಯನ್ವಯ ವಿತರಿಸಲಾಗುತ್ತಿರುವ ಕೇಂದ್ರ ಸರ್ಕಾರದ 5 ಕೆಜಿ ಆಹಾರ ಧಾನ್ಯದೊಂದಿಗೆ ರಾಜ್ಯ ಸರ್ಕಾರದ ವತಿಯಿಂದ ಹೆಚ್ಚುವರಿಯಾಗಿ 5 ಕೆಜಿ ಅಹಾರ ಧಾನ್ಯದ ಬದಲಾಗಿ ಪ್ರತಿ ಕೆಜಿಗೆ ರೂ 34 ರಂತೆ ಪಡಿತರ ಚೀಟಿಯಲ್ಲಿನ ಕುಟುಂಬದ ಮುಖ್ಯಸ್ಥರ ಬ್ಯಾಂಕ್ ಖಾತೆಗೆ ಡಿಬಿಟಿ ಮೂಲಕ ರೂ.170 ರಂತೆ ಹಣವನ್ನು ನಿಯಮಾನುಸಾರ ವರ್ಗಾಯಿಸಲಾಗುತ್ತಿತ್ತು. ಆದರೆ ಫೆಬ್ರವರಿ ಮಾಹೆಯಿಂದ ಜಾರಿಗೆ ಬರುವಂತೆ ನೇರ ನಗದು ವರ್ಗಾವಣೆ ಬದಲಾಗಿ ಅನ್ನ ಭಾಗ್ಯ ಯೋಜನೆಯಡಿ ಅರ್ಹ ಪ್ರತಿ ಫಲಾನುಭವಿಗಳಿಗೆ 5 ಕೆಜಿ ಆಹಾರ ಧಾನ್ಯವನ್ನು ಹೆಚ್ಚುವರಿಯಾಗಿ ವಿತರಿಸಲಾಗುತ್ತದೆ.

## ಮಾ.18 ಪೂರ್ವಭಾವಿ ಸಿದ್ಧತಾ ಸಭೆ

■ ಹಂಪಿ ಟೈಮ್ಸ್ ಬಳ್ಳಾರಿ

ಮಾಜಿ ಉಪ ಪ್ರಧಾನಮಂತ್ರಿ ಹಾಗೂ ಹಸಿರು ಕ್ರಾಂತಿ ಹರಿ ಕಾರರಾದ ಡಾ.ಬಾಬು ಜಗಜೀವನ ರಾಂ ಅವರ 118 ನೇ ಜಯಂತೋತ್ಸವ ಮತ್ತು ಭಾರತ ರತ್ನ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರ 134ನೇ ಜಯಂತೋತ್ಸವ ಕುರಿತು ಮಾ.18 ರಂದು ಬೆಳಿಗ್ಗೆ 11 ಗಂಟೆಗೆ ಜಿಲ್ಲಾ ಪಂಚಾಯತ್ ನ ನೂತನ ನಜೀರ್ ಸಭಾಂಗಣದಲ್ಲಿ ಪೂರ್ವಭಾವಿ ಸಿದ್ಧತಾ ಸಭೆ ನಿಗದಿಪಡಿಸಲಾಗಿದೆ.

ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಅಧ್ಯಕ್ಷತೆ ವಹಿಸುವರು. ಸಭೆಗೆ ಎಲ್ಲಾ ಸಂಘ–ಸಂಸ್ಥೆಗಳ ಪದಾಧಿಕಾರಿಗಳು, ಮುಖಂಡರು ಮತ್ತು ಜಿಲ್ಲಾ ಮಟ್ಟದ ಅಧಿಕಾರಿಗಳು ತಪ್ಪದೇ ಹಾಜರಾಗಬೇಕು ಎಂದು ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಮಲ್ಲಿಕಾರ್ಜುನ ಅವರು ತಿಳಿಸಿದ್ದಾರೆ.

## ಮಾ. 19 ಕೊಪ್ಪಳ ವಿವಿ ದ್ವಿತಿಯ ಸಂಸ್ಥಾಪನಾ ದಿನಾಚರಣೆ

■ ಹಂಪಿ ಟೈಮ್ಸ್ ಕೊಪ್ಪಳ

ಕೊಪ್ಪಳ ವಿಶ್ವವಿದ್ಯಾಲಯದ ದ್ವಿತಿಯ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮವನ್ನು ಮಾರ್ಚ್ 19 ರಂದು ಬೆಳಿಗ್ಗೆ 10.30 ಗಂಟೆಗೆ ಕೊಪ್ಪಳ ನಗರದ ಸಾಹಿತ್ಯ ಭವನದಲ್ಲಿ ಆಯೋಜಿಸಲಾಗಿದೆ. >> 3

### ಅಪ್ಪು ಅಭಿಮಾನಿಗಳಿಂದ ಹುಟ್ಟುಹಬ್ಬ ಆಚರಣೆ | ಗುಳಿಗಿ ವೀರೇಂದ್ರ ಅಭಿಮತ

# ಅಭಿಮಾನಿಗಳ ಮನದಲ್ಲಿ ಅಪ್ಪು ಶಾಶ್ವತ



■ ಹಂಪಿ ಟೈಮ್ಸ್ ಕೂಡ್ಲಿಗಿ


ದೈಹಿಕವಾಗಿ ಪುನೀತ್ ರಾಜ್‌ಕುಮಾರ್ ನಮ್ಮೊಂದಿಗೆ ಇಲ್ಲದಿದ್ದರೂ, ಕೋಟ್ಯಂತರ ಅಭಿಮಾನಿಗಳ ಮನಸ್ಸಿನಲ್ಲಿ ಅಪ್ಪು ಎಂದೆಂದಿಗೂ ಅಮರ ಎಂದು ಬಿಜೆಪಿ ರಾಜ್ಯ ಪ್ರಕೋಷ್ಠದ ಅಧ್ಯಕ್ಷ ಗುಳಿಗೆ ವೀರೇಂದ್ರ ಕುಮಾರ್ ಹೇಳಿದರು.

ಪಟ್ಟಣದ ಪಾದಗಟ್ಟೆ ವೃತದ ಬಳಿಯ ಪುನೀತ್ ವೃತ್ತದಲ್ಲಿ ಅಪ್ಪು ಅಭಿಮಾನಿ ಬಳಗ ಏರ್ಪಡಿಸಿದ್ದ ಪುನೀತ್ ರಾಜಕುಮಾರ ಹುಟ್ಟುಹಬ್ಬದ ನಿಮಿತ್ತ ಬೃಹತ್ ಕೇಕ್ ಕತ್ತರಿಸಿ ಮಾತನಾಡಿದರು. ಪುನೀತ್ ರಾಜ್‌ಕುಮಾರ್ ನಮ್ಮೊಂದಿಗಿಲ್ಲ. ಆದರೂ, ಅಭಿಮಾನಿಗಳ ಮನಸ್ಸಿನಲ್ಲಿ ಅಪ್ಪು ಶಾಶ್ವತವಾಗಿ ಉಳಿದಿದ್ದಾರೆ. ಪ್ರತಿ ವರ್ಷ ಪುನೀತ್ ರಾಜ್‌ಕುಮಾರ್ ಅವರ ಹುಟ್ಟುಹಬ್ಬ ಬಂತೂ ಅಂದರೆ, ಅವರ ಸದಾಶಿವನಗರದ ನಿವಾಸದ ಮುಂದೆ ದೊಡ್ಡ ಜಾತ್ರೆಯೇ ನಡೆಯುತ್ತಿತ್ತು. ಪುನೀತ್ ರಾಜ್‌ಕುಮಾರ್‌ಗೆ ಶುಭ ಕೋರಲು ನೂರಾರು ಜನರು ಅವರ ಮನೆ ಮುಂದೆ ಜಮಾಯಿಸುತ್ತಿದ್ದರು. ಅಪ್ಪುಗಾಗಿ ಫ್ಯಾನ್ಸ್ ತರಹೇವಾರಿ ಕೇಕ್‌ಗಳನ್ನ ತರುತ್ತಿದ್ದರು. ತಮ್ಮ ಜನ್ಮದಿನವನ್ನು ಅಭಿಮಾನಿಗಳಿಗಾಗಿಯೇ ಪುನೀತ್ ರಾಜ್ ಕುಮಾರ್ ಮೀಸಲಿಡುತ್ತಿದ್ದರು. ಒಬ್ಬ ಕಲಾವಿದ ಯಾವ ರೀತಿ ತೆರೆಯ ಮೇಲೆ ನಾಯಕ ನಟನಾಗಿ ಸಮಾಜಮುಖಿ ಕಾರ್ಯ ಮಾಡಿ ಹೀರೋ ಆಗಿ ಮಿಂಚುತ್ತಾನೋ, ನಿಜ ಜೀವನದಲ್ಲೂ ಪುನೀತ್ ರಾಜಕುಮಾರ ಸಮಾಜಮುಖಿ ಕಾರ್ಯಗಳನ್ನು ಮಾಡಿ, ನಿರ್ಗತಿಕರಿಗೆ ಆರ್ಥಿಕ ಸಹಾಯ ಮಾಡಿದ ಉದಾಹರಣೆಗಳು ನೂರಾರು, ಅಪ್ಪು ಮಾಡಿದ ದಾನ ಧರ್ಮಗಳೇ ಇವತ್ತು ಆ ಮನುಷ್ಯನನ್ನು ಇನ್ನೂ ಅಭಿಮಾನಿಗಳ ಮನಸ್ಸಿನಲ್ಲಿ ಅಚ್ಚಳಿಯದೇ ಉಳಿಯಲು ಸಾಧ್ಯವಾಯಿತು ಎಂದು ತಿಳಿಸಿದರು.

ಪಪಂ ಅಧ್ಯಕ್ಷ ಕಾವಲಿ ಶಿವಪ್ಪನಾಯಕ ಮಾತನಾಡಿ, ದಾನ,ಧರ್ಮವನ್ನು ಯಾರಿಗೂ ತಿಳಯದೇ ಮಾಡಿ ಅವರ ನಿಧನದ ನಂತರವೇ ಎಲ್ಲವೂ ತಿಳಿದಿದ್ದು, ಕೂಡ್ಲಿಗಿ ಸರ್ಕಾರಿ ಜೂನಿಯರ್ >>3

# ಹುಬ್ಬಳ್ಳಿ–ತಿರುಪತಿ ರೈಲು ಪುನರಾರಂಭ

### ಹೊಸಪೇಟೆ–ಬಳ್ಳಾರಿಗೆ ರೈಲು 20 ರೂ, ಬಸ್‌ಗೆ 76ರೂ ಚಾರ್ಜ್ : ವೈ ಯಮುನೇಶ ಹೇಳಿಕೆ



■ ಹಂಪಿ ಟೈಮ್ಸ್ ಹೊಸಪೇಟೆ

ಮಹಾ ಕುಂಬಮೇಳದ ನಿಮಿತ್ಯ ಪ್ರಯಾಗ್‌ರಾಜ್‌ಗೆ ತೆರಳಿದ್ದ ಹುಬ್ಬಳ್ಳಿ – ತಿರುಪತಿ ಗಾಡಿ ಸಂಖ್ಯೆ : 57401/57402, ಮೂರು ತಿಂಗಳ ನಂತರ ಮಾ.17 ರಿಂದ ಪುನರ್ ಆರಂಭಗೊಂಡಿರುವುದು ಹರ್ಷದಾಯಕ, ಅದೇ ರೀತಿ ನೈರುತ್ಯ ರೈಲ್ವೆ ಪ್ರಧಾನ ವ್ಯವಸ್ಥಾಪಕರು ಮಹಾ ಕುಂಭಮೇಳದ ನಿಮಿತ್ತ ರದ್ದಾಗಿಸಿದ್ದ ಎಕ್ಸ್‌ಪ್ರೆಸ್ ರೈಲು ಬೆಳಗಾವಿ – ಹೊಸಪೇಟೆ – ಹೈದ್ರಬಾದ್ – ಮಣಗೂರು ಗಾಡಿ ಸಂಖ್ಯೆ : 07335/07336 ರೈಲನ್ನು ಕೂಡಲೇ ಪುನರಾರಂಭಿಸಬೇಕು ಎಂದು ವಿಜಯನಗರ ರೈಲ್ವೆ ಅಭಿವೃದ್ಧಿ ಕ್ರಿಯಾ ಸಮಿತಿ ಅಧ್ಯಕ್ಷ ವೈ.ಯಮುನೇಶ, ಕಾರ್ಯದರ್ಶಿ ಕೆ.ಮಹೇಶ ಆಗ್ರಹಿಸಿದ್ದಾರೆ.

ಹುಬ್ಬಳ್ಳಿ–ತಿರುಪತಿ: ಹುಬ್ಬಳ್ಳಿಯಿಂದ ಬೆಳಿಗ್ಗೆ : 06:00 ಗಂಟೆಗೆ ನಿರ್ಗಮಿಸಿ ಗದಗ ಮಾರ್ಗವಾಗಿ ಹೊಸಪೇಟೆಗೆ ಬೆಳಿಗ್ಗೆ : 09:00ಗಂಟೆಗೆ ಆಗಮಿಸುವುದು, ನಂತರ ಬಳ್ಳಾರಿ – ಕಡಪ ಮಾರ್ಗವಾಗಿ ರಾತ್ರಿ : 10:00ಗಂಟೆಗೆ ತಿರುಪತಿಗೆ ತಲುಪುತ್ತದೆ. ಅದೇ ರೀತಿ ತಿರುಪತಿಯಿಂದ ಬೆಳಿಗ್ಗೆ : 06:00ಗಂಟೆಗೆ ನಿರ್ಗಮಿಸಿ ಹೊಸಪೇಟೆಗೆ ಸಂಜೆ : 05:20ಕ್ಕೆ ಆಗಮಿಸಿ ಹುಬ್ಬಳ್ಳಿಯನ್ನು ರಾತ್ರಿ : 09:30ಕ್ಕೆ ತಲುಪುತ್ತದೆ. ಈ ರೈಲು ಪ್ಯಾಸೆಂಜರ್ ಆಗಿದ್ದು, ಹೊಸಪೇಟೆಯಿಂದ ಹುಬ್ಬಳ್ಳಿಗೆ ರೂ.35/–, ಬಳ್ಳಾರಿಗೆ ರೂ.20/– (ಬಸ್‌ದರ ರೂ.76/–), ಗುಂತಕಲ್‌ಗೆ ರೂ.35/– ಹಾಗೂ ತಿರುಪತಿಗೆ ರೂ.85/– ಆಗಿರುತ್ತದೆ. ಅತ್ಯಂತ ಕಡಿಮೆ ಧರ ರಿಯಾಯಿತಿ ಸೌಲಭ್ಯವನ್ನು ಪ್ರಯಾಣಿಕರು ಸದ್ಬಳಕೆ ಮಾಡಿಕೊಳ್ಳಬೇಕು. ಈ ಭಾಗದಲ್ಲಿ ಸಕಾಲದಲ್ಲಿ ನಿಗಧಿತ ವೇಳಾಪಟ್ಟಿಯಂತೆ ರೈಲುಗಳ ಸಂಚಾರ, ಹಾಗೂ ಪ್ರಯಾಣಿಕರಿಗೆ ಮೂಲಸೌಕರ್ಯಗಳನ್ನು ರೈಲ್ವೆ ಅಧಿಕಾರಿಗಳು ಕಲ್ಪಿಸಿಲು ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದ್ದಾರೆ.


EXAM

## ನಾವು ಭಯವನ್ನು ಜಯಸುತ್ತೇವೆ ನಮಗಿಲ್ಲ ಆತಂಕ...

www.hampitimes.com/epaper.hampitimes.com

ನಾವು ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳು, ಪರೀಕ್ಷೆಯ ದಿನ ಸಮೀಪಿಸುತ್ತಿದ್ದರೂ ನಾವು ಆತ್ಮವಿಶ್ವಾಸದಿಂದ ಪೂರ್ಣ ಸಿದ್ಧರಾಗಿದ್ದೇವೆ. ನಮ್ಮ ಅಧ್ಯಯನ, ಮಾರ್ಗದರ್ಶನ ಮತ್ತು ಪರಿಶ್ರಮ ನಮ್ಮ ಶಕ್ತಿಯ ಮೂಲವಾಗಿದೆ. ಪ್ರಶ್ನೆಪತ್ರಿಕೆ ನಮ್ಮ ಎದುರು ಬಂದಾಗ, ತಲೆತಗ್ಗಿಸದೆ ಧೈರ್ಯದಿಂದ ಉತ್ತರಿಸುತ್ತೇವೆ.

"ನಮ್ಮ ಭವಿಷ್ಯ ನಮ್ಮ ಕೈಯಲ್ಲಿದೆ!"
ನಾವು ಎಚ್ಚರಿಕೆಯಿಂದ, ಮನೋಸ್ಥೈರ್ಯದಿಂದ ಮತ್ತು ಆತ್ಮವಿಶ್ವಾಸದಿಂದ ಉತ್ತರಿಸುತ್ತೇವೆ. ವೈಫಲ್ಯ ಎಂಬುದು ನಮ್ಮ ಮನಸ್ಸಿಗೆ ಪ್ರವೇಶವಿಲ್ಲ – ಜಯ ನಮ್ಮ ಗುರಿ!

" ನಂಬಿಕೆ, ಪರಿಶ್ರಮ ಮತ್ತು ಧೈರ್ಯ "
ಈ ಮೂರನ್ನು ನಮ್ಮ ಹತ್ತಿರ ಇಟ್ಟುಕೊಂಡಿದ್ದೇವೆ.
ಆದ್ದರಿಂದ, ಪಾಲಕರೇ, ಶಿಕ್ಷಕರೇ – ನೀವು ನಮ್ಮ ಮೇಲೆ ನಂಬಿಕೆ ಇಡಿ. ನಾವು ಸಂಪೂರ್ಣ ಸಿದ್ಧರಾಗಿದ್ದೇವೆ.

"ವಿಜಯ ನಮ್ಮದೇ!"
ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳು



## ಯುವಕರು ಶಿಕ್ಷಣದ ಜೊತೆ ಕ್ರೀಡೆಯಲ್ಲೂ ತೊಡಗಿಸಿಕೊಳ್ಳಬೇಕು: ಮೇಯರ್ ಮುಲ್ಲಂಗಿ ನಂದೀಶ್



■ **ಹಂಪಿ ಟೈಮ್ಸ್ ಬಳ್ಳಾರಿ**

ಕ್ರೀಡೆ ಎಂಬುದು ಕೇವಲ ಮನರಂಜನೆಗೆ ಮಾತ್ರ ಸೀಮಿತವಾಗಿರದೇ ಮನುಷ್ಯನ ಮಾನಸಿಕ ಹಾಗೂ ಸಾಂಸ್ಕೃತಿಕ ಬೆಳವಣಿಗೆಗೂ ಸಾಕಷ್ಟು ಪ್ರಯೋಜನಕಾರಿಯಾಗಿದೆ ಎಂದು ಮಹಾನಗರ ಪಾಲಿಕೆಯ ಮಹಾಪೌರರಾದ ಮುಲ್ಲಂಗಿ ನಂದೀಶ್ ಅವರು ಹೇಳಿದರು.

ನೆಹರು ಯುವ ಕೇಂದ್ರ, ಯುವ ಕಾರ್ಯ ಮತ್ತು ಕ್ರೀಡಾ ಸಚಿವಾಲಯ ಹಾಗೂ ಲಿಯಾ ಯೂತ್ ಅಸೋಸಿಯೇಷನ್(ರಿ) ಇವರ ಸಂಯುಕ್ತಾಶ್ರಯದಲ್ಲಿ ನಗರದ ಶ್ರೀಮತಿ ಗಾಲಿ ರುಕ್ಮಣಮ್ಮ ಚೆಂಗಾರೆಡ್ಡಿ ಸ್ಮಾರಕ ಸರ್ಕಾರಿ ವಾಣಿಜ್ಯ ಮತ್ತು ನಿರ್ವಾಹಣ ಕಾಲೇಜ್‌ನಲ್ಲಿ ಸೋಮವಾರ ಆಯೋಜಿಸಿದ್ದ ಜಿಲ್ಲಾ ಮಟ್ಟದ ಕ್ರೀಡಾಕೂಟ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಯುವಜನತೆಯಲ್ಲಿ ಶಿಸ್ತು, ನಾಯಕತ್ವ ಹಾಗೂ ಸಂಘಟನೆಮುಖ್ಯ.ಶಿಕ್ಷಣದಜೊತೆಕ್ರೀಡೆಯಲ್ಲೂತೊಡಗಿಸಿಕೊಳ್ಳುವುದರಿಂದ ಇವುಗಳು ಬೆಳೆಯಲು ಸಾಧ್ಯ ಎಂದು ತಿಳಿಸಿದರು.

ಶ್ರೀಮತಿ ಗಾಲಿ ರುಕ್ಮಣಮ್ಮ ಚೆಂಗಾರೆಡ್ಡಿ ಸ್ಮಾರಕ ಸರ್ಕಾರಿ ವಾಣಿಜ್ಯ ಮತ್ತು ನಿರ್ವಾಹಣ ಕಾಲೇಜಿನ ಪ್ರಾಚಾರ್ಯರಾದ ಡಾ.ಸುಧಾಕರ.ಡಿ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿ, ಓದಿನೊಂದಿಗೆ ಕ್ರೀಡೆಗೂ ಒತ್ತು ನೀಡಿದಾಗ ಯುವ ಸಮುದಾಯ ಆರೋಗ್ಯವಂತರಾಗಿರಬಹುದು ಎಂದು ತಿಳಿಸಿದರು.

ನೆಹರು ಯುವ ಕೇಂದ್ರದ ಯುವ ಅಧಿಕಾರಿ ಮೊಂಟ್ ಪತ್ತಾರ್ ಅವರು ಕ್ರೀಡೆಗಳ ಬಗ್ಗೆ ವಿದ್ಯಾರ್ಥಿಗಳಿಗೆ ಸಂಕ್ಷಿಪ್ತ ಮಾಹಿತಿ ನೀಡಿದರು.

ಕ್ರೀಡಾಕೂಟದಲ್ಲಿ ವಾಲಿಬಾಲ್, ಖೋಖೋ, 100 ಮೀ. ಓಟ ಸ್ಪರ್ಧೆ, ಸ್ಲೋಸೈಕಲಿಂಗ್ ಕ್ರೀಡೆಗಳನ್ನು ಆಯೋಜಿಸಲಾಗಿತ್ತು. ಕ್ರೀಡಾಕೂಟದಲ್ಲಿ ವಿಜೇತರಿಗೆ ಬಹುಮಾನ ಮತ್ತು ಪ್ರಶಸ್ತಿ ಪತ್ರ ನೀಡಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ದೈಹಿಕ ಶಿಕ್ಷಕ ಮುತ್ತೇಗೌಡ, ಕ್ರೀಡಾಕೂಟ ಆಯೋಜಕ ಆರ್.ಕೆ.ಅಬ್ರಹಾಂ, ಎನ್.ಐ.ಎಫ್.ಎ.ಎ ಮತ್ತು ವಿದ್ಯಾರ್ಥಿಗಳು ಭಾಗವಹಿಸಿದ್ದರು.

**ಕ್ರೀಡಾಕೂಟದಲ್ಲಿ ವಿಜೇತರಾದವರು:**

100 ಮೀ. ಓಟ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ–ಮೇಘನಾ, ದ್ವಿತೀಯ ಬಹುಮಾನ–ರತ್ತಮ್, ತೃತೀಯ ಬಹುಮಾನ–ಶಾಂತ. ಖೋಖೋ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ–ಎಎಸ್ಎಮ್ ಕಾಲೇಜ್, ದ್ವಿತೀಯ ಬಹುಮಾನ–ಎಸ್ಎಲಅರ್‌ಸಿಎಮ್ ಕಾಲೇಜಿನ ಶೃತಿ. ವಾಲಿಬಾಲ್ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ–ಎಸ್ಎಲಅರ್‌ಸಿಎಮ್ ಕಾಲೇಜ್‌ನ ಚಂದ್ರಶೇಖರ, ದ್ವಿತೀಯ ಬಹುಮಾನ–ಶ್ರೀ ಮೇಧಾ ಕಾಲೇಜಿನ ಪಂಪಾಪತಿ. ಸ್ಲೋ–ಸೈಕಲಿಂಗ್ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ–ಮೇಧ, ದ್ವಿತೀಯ ಬಹುಮಾನ–ನಂದಿನಿ, ತೃತೀಯ ಬಹುಮಾನ–ನಿವೀದಿತ್.

**ನಿಮ್ಮೂರ ಜಾತ್ರಾ ಮಹೋತ್ಸವಕ್ಕೆ ಸ್ವಾಗತ/ ಶುಭಾಶಯ ಕೋರುವ ಮೂಲಕ ನಿಮ್ಮೂರಿನ ಉತ್ಸವ ವೈಶಿಷ್ಟ್ಯವನ್ನು ಯುವಜನತೆಗೆ ತಿಳಿಸಲು ಬಯಸುವವರು ಸಂಪರ್ಕಿಸಿ**

**ಮೊ: 9448633038**

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

### ಬೆಳಕಿನ ಹಾದಿ

ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

–: ಸಂಪಾದಕರು :–

**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**

ಇ–ಮೇಲ್:hampitimes@gmail.com

M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

# ಹಣದ ಮೋಹದಲ್ಲಿ ಮಾನವೀಯತೆ ಮರೆ!

**ಹಣ ಬೇಕು, ಗಳಿಸುವುದೇ ನಮ್ಮ ಗುರಿ ಅನ್ನೋ ಮನೋಭಾವ ನಮ್ಮದಾಗಬಾರದು | ಹಣದ ವಾಸನೆಯಿಂದ ದೂರವಿದ್ದಷ್ಟು ಮನುಷ್ಯರಾಗಿರಲು ಸಾಧ್ಯ**

ಲೋಕದಲ್ಲಿ ಮನುಷ್ಯ ತನ್ನ ಅನುಕೂಲಕ್ಕೆ ಒದಗುವ ಪ್ರತಿಯೊಂದು ವಸ್ತುವಿಗೂ ಬೆಲೆಯನ್ನು ನಿಗದಿ ಮಾಡಿದ. ಬೆಲೆಯು ಆ ವಸ್ತುವಿನ ಮೌಲ್ಯವನ್ನು ಹೇಳುವ ಕಾರ್ಯವನ್ನು ಮಾಡುತ್ತಿತ್ತು. ವಸ್ತುವಿನ ಉತ್ಪಾದನೆ ಹಾಗೂ ಉಪಭೋಗದ ನೆಲೆಯಲ್ಲಿ ಬೆಲೆಯು ಕಾಲದಿಂದ ಕಾಲಕ್ಕೆ ಹೆಚ್ಚು ಕಮ್ಮಿಯಾಗುವುದು ಇತ್ತು. ನೆಲದ ಮೌಲ್ಯಗಳು ಮನುಷ್ಯನ ಜೀವನದ ಜೊತೆಯಲ್ಲಿ ಗಪ್ಪಗೆ ಇರುವ ಕಾದಲ್ಲಿ ಹಣ ಎನ್ನುವ ಮಾಧ್ಯಮವು ತನ್ನದೇ ಪ್ರಭುತ್ವ ಹೊಂದಿರಲಿಲ್ಲ. ಹಣ ಬೇಕು ಅಷ್ಟೇ ಆದರೆ ಅದೇ ಪ್ರಧಾನವಾಗಿರಲಿಲ್ಲ. ಸಮಾಜದಲ್ಲಿ ಹಣವನ್ನು ಉಪೇಕ್ಷೆ ಮಾಡಿ ಬದುಕಿದ ಅನೇಕರ ಬಗ್ಗೆಯೂ ನಾವು ತಿಳಿದಿದ್ದೇವೆ. ಹಣ ನೆಮ್ಮದಿಯನ್ನು ನೀಡುವುದಿಲ್ಲ ಅಂಬೋ ತಿಳುವಳಿಕೆಯು ಈ ಲೋಕದಲ್ಲಿಯೂ ಉಂಟು. ನೆಲವನ್ನು ಉತ್ತಿ–ಬಿತ್ತಿ ಬೆಳೆದ ಉತ್ಪನ್ನವನ್ನೇ ಇತರೆ ವಸ್ತುಗಳೊಂದಿಗೆ ವಿನಿಮಯ ಮಾಡುವ, ದುಡಿಮೆ ಕೂಲಿಯಾಗಿ ಅಕ್ಕಿಯೋ, ಭತ್ತವೋ ನೀಡುವ ಪರಿಪಾಠ ನಮ್ಮ ನೆಲದಲ್ಲಿ ಇತ್ತು.

ವಸ್ತು ವಿನಿಮಯ ಪದ್ಧತಿಯ ಮೌಲೀಕರಣವು ನೆಲದ ಕಸುವುವನ್ನು ಬಿಗುವಾಗಿ ಹೊಂದಿದ್ದ ಕಾರಣ ನಾವು ನಮ್ಮವರು ಅನ್ನೊ ಕಕ್ಕುಲಾತಿ, ಜೀವ ಸಂಬಂಧ, ಪ್ರೀತಿ–ವಿಶ್ವಾಸಗಳೆಂಬ ಅಲೋಚನೆಗಳೆಲ್ಲ ನಡೆದಾಡುತ್ತಿದ್ದವು. ಸಂಪತ್ತನ್ನು ಸಂಗ್ರಹಿಸುವ ಮತ್ತು ಅದರಿಂದಲೇ ಪ್ರತಿಯೊಂದನ್ನು ಕೊಳ್ಳ ಬಹುದು ಎಂಬ ತಿಳುವಳಿಕೆಯೇ ಜೀವನದ ಉನ್ನತ ವಾದ ಆದರ್ಶ ವಾಗಿರಲಿಲ್ಲ. ಸಾಮ್ರಾಜ್ಯ, ಸಂಪತ್ತು ಎಲ್ಲವನ್ನು ಬಿಟ್ಟು ನಡೆದ ಬುದ್ಧ ತಿಳುವಳಿಕೆಯ ನಿಧಿಯಾಗಿ ಹೋದ. ಅದೇಷ್ಟೋ ಜನ ಕೋಟ್ಯಾದಿ ಪತಿಗಳು ತಮ್ಮ ಹಣವೆಲ್ಲ ವನ್ನು ಜನರ ಮಡಿಲಿಗೆಸೆದು ನೆಮ್ಮದಿಯ ನಿಟ್ಟುಸಿರು ಬಿಟ್ಟ ವರ ಕತೆಗಳನ್ನು ನಾವು ಕೇಳಿದ್ದೇವೆ. ಬೌದ್ಧ ಸನ್ಯಾಸಿ ಗಳು ಒಂದು ಕಾಲದಲ್ಲಿ ಹಣವನ್ನು ಕೈಯಲ್ಲಿ ಮುಟ್ಟು ವುದು ಸಹ ಮನಸ್ಸಿನ ಮೈಲಿಗೆ ಅಂತ ಭಾವಿಸಿದರು. ಜನ ಸಾಮಾನ್ಯರಲ್ಲಿ ಹಣದ ಗೀಳು ನಿಲ್ಲುವುದಕ್ಕೆ ಪ್ರಭು ತ್ವವೇ ಕಾರಣವಾಗಿದೆ. ಈ ನೆಲವನ್ನು ಆಳ್ವಿಕೆ ಮಾಡಿದ ಪ್ರಭುತ್ವ ವ್ಯವಸ್ಥೆವು ಕಾಲ ಕಾಲಕ್ಕೆ ಹಣದ ರೂಪ ಮತ್ತು ಮೌಲ್ಯವನ್ನು ನಿಗದಿ ಮಾಡಿ ಜನ ನಡುವೆ ಸಂಕಲಿಸಿತು. ಹಣ ಎನ್ನುವುದು ಒಂದು ಮೌಲ್ಯ ಅಷ್ಟೇ. ಇದನ್ನು ಜನರು ಹುಟ್ಟು ಹಾಕಿ ನಡೆಸಲಿಲ್ಲ. ಬದಲಿಗೆ ಪ್ರಭುತ್ವವು ತನ್ನ ಸಂಪತ್ತಿನ ಸಂಗ್ರಹಣೆಗಾಗಿ ಹಣವನ್ನು ಹುಟ್ಟು ಹಾಕಿತು. ಆಹಾರ–ಬಟ್ಟೆ–ವಸತಿಗಳ ಜೊತೆಯಲ್ಲಿ ಮನುಷ್ಯ ಸಂಬಂಧಗಳಾದ ನಂಬಿಕೆ, ಪ್ರೀತಿ, ವಿಶ್ವಾಸ, ಮಮಕಾರ, ಸತ್ಯ–ನ್ಯಾಯಗಳೆಲ್ಲ ಬಹು ಜನರ ಬದುಕಿನ ಮೌಲ್ಯಗಳಾಗಿದ್ದು ಈ ಮೌಲ್ಯಗಳೇ ಲೋಕದಲ್ಲಿ ನೆಲದ ಸತ್ವವನ್ನು, ಮಾನವಿಯ ಗುಣಗಳನ್ನು ಹುಟ್ಟು ಹಾಕಿತ್ತು. ಹಸಿವಿನ ಹೊತ್ತಿನಲ್ಲಿ ಯಾರಾದರೂ ಮನೆಗೆ ಬಂದರೆ ಅನ್ನ–ನೀರು ನೀಡಿ ಮತ್ತೆ ಅವರನ್ನು ವಿಚಾರಿಸಿ ಬೇಕಾದ ಸಹಾಯ ಮಾಡುತ್ತಿದ್ದದ್ದು ಇತ್ತು. ಊರಿಗೆ ಕಳ್ಳರು, ಪೋಲಿಗಳು ನುಗ್ಗಿದರೇ ಊರಿನವರೆಲ್ಲ ಒಟ್ಟುಗೂಡಿ ಹೋರಾಡುವುದಿತ್ತು. ತನ್ನ ಪ್ರಾಣವನ್ನು ತೆತ್ತಾದರೂ ಇನ್ನೊಬ್ಬರನ್ನು ರಕ್ಷಿಸುವ ಯೋಚನೆಗಳು ಮನುಷ್ಯನ ಹೃದಯದಲ್ಲಿ ದ್ದಾಗ ಹಣದ ಸೊಂಕು ಅವನನ್ನು ಅಷ್ಟಾಗಿ ಬಾಧಿಸಿದಂತೆ ತೋರುವುದಿಲ್ಲ.



ಡಾ.ಸುಬ್ರಹ್ಮಣ್ಯ ಸಿ ಕುಂದೂರು
ಲೇಖಕರು, ಮಂಗಳೂರು

Scan For Digital Colourful HAMPI TIMES E-paper



ಹಣದ ಮೌಲ್ಯವನ್ನು ಪ್ರಭುತ್ವವು ಪ್ರಧಾನವಾದ ಸತ್ವ ಅಂತ ಅಂಗೀಕರಿಸಿ ನಡೆಯುತ್ತಿದ್ದಂತೆ ಸಾಮಾನ್ಯ ಜನರು ಹಣವನ್ನೇ ನೆಚ್ಚಿಕೊಂಡರಲ್ಲದೇ ಲೋಕದಲ್ಲಿ ಆಗುವ ಒಳ್ಳೆಯ ಕೆಡುಕಿನ ಎಲ್ಲಾ ಘಟನೆಗಳ ಮೂಲ ಹಣದ ಸತ್ವವೇ ಆಗಿ ಹೋಯಿತು. ವಸ್ತುಗಳಿಂದ ಹಿಡಿದು ನ್ಯಾಯ–ನೀತಿ, ಸ್ಥಾನ–ಅಂತಸ್ತು, ಸುಖ–ಸಂತೋಷ, ಮಾತು–ಕತೆ, ಪ್ರೀತಿ–ಪ್ರೇಮವೆಲ್ಲ ಹಣದಿಂದ ಕೊಳ್ಳಬಹುದು ಅನ್ನೋ ನಂಬಿಕೆ ಮತ್ತು ವಾಸ್ತವವು ಮನುಷ್ಯನ ಮನದೊಳಗೆ ನಿಂತಾಗ ಹಣ ಗಳಿಸಬೇಕು ಅನ್ನೋ ಹಂಬಲ ಹುಟ್ಟಿಕೊಂಡಿತು. 'ಹಣ ಕಂಡರೇ ಹೆಣವು ಬಾಯಿ ಬಿಡುತ್ತದೆ' ಅನ್ನೋ ಗಾದೆ ಮಾತು ಹುಟ್ಟಿದ್ದು ಇದಕ್ಕೆ ಇರಬೇಕು. ಹಣವನ್ನು ಗುಡ್ಡೇ ಹಾಕುವುದಕ್ಕೆ ನಿಂತ ಪ್ರತಿಯೊಬ್ಬನಿಗೂ ಸಾಕು ಅನ್ನಿಸಲಿಲ್ಲ. ಹಣವನ್ನು ಕೂಡಿಕೊಂಡಂತೆ ತಾನು ಶ್ರೀಮಂತ ಏನು ಬೇಕಾದರೂ ಮಾಡಬಹುದು ಅಂಬೋ ತಿಳುವಳಿಕೆಯು ಅವನ ಮನದಲ್ಲಿ ನಿಂತು ನಡೆದಂತೆ ಈ ನೆಲದ ಸತ್ಯ, ನೀತಿ, ನ್ಯಾಯ, ನಂಬಿಕೆ, ಪ್ರೀತಿ, ವಿಶ್ವಾಸ, ಮಾನವೀಯ ಸಂಬಂಧಗಳು ನಮ್ಮ ಪರಿಸರವನ್ನು ಬಿಟ್ಟು ಹೋಗಿದ್ದು ದುರಂತವೇ ಆಗಿದೆ.

ದಾನ–ಧರ್ಮಗಳು ನಮ್ಮ ಪರಿಸರದ ಪ್ರಜ್ಞೆಯಾಗಿ ನಿಲ್ಲದ ಈ ಕಾಲಮಾನದಲ್ಲಿ ಪ್ರತಿಯೊಂದನ್ನು ಹಣದ ಆಶ್ರಯದಿಂದಲೇ ಪಡೆಯಬೇಕು ಅನ್ನೋ ಲೋಕದ ಮೀಮಾಂಸೆಯು ಹಣವನ್ನು ಗಳಿಸುವಂತೆ ಮತ್ತು ಅದನ್ನೇ ತನ್ನ ಆದರ್ಶವೆಂದು ಒಪ್ಪಿಕೊಳ್ಳುವಂತೆ ಮಾಡಿದೆ. ಹಣದ ಅಮಲು ಅಫೀಮಿಗಿಂತಲು ಕ್ರೂರವಾದದ್ದು. ಒಮ್ಮೆ ಅದರ ದಾಸರಾದರೆ ಮತ್ತೆ ಎಲ್ಲವನ್ನು, ಎಲ್ಲರನ್ನೂ ದಾಸರಾಗಿಯೇ ನೋಡುವ ಪರಿಪಾಠವನ್ನು ನಮ್ಮ ಮನಸ್ಸಿನಲ್ಲಿ ಬಿತ್ತಿ ಬಿಡುತ್ತದೆ. 'ನನಗೆ ಪರಿಚಿತರಿರುವ ಇಬ್ಬರು ವಿದ್ಯಾರ್ಥಿ ಗೆಳೆಯರು ಬಸ್ಸಿನಲ್ಲಿ ಸಿಕ್ಕರು ನಾನು ಅವರನ್ನು ಗುರುತು ಹಿಡಿದು "ನೀವು ಪರೀಕ್ಷೆಗೆ ಹೋಗಿಲ್ಲವೇನು? ಅದು ಅವೊತ್ತು ಮುಖ್ಯ ಪರೀಕ್ಷೆ ಅಲ್ವ" ಅಂತ ಕೇಳಿದೆ. ಅವರು ನನ್ನನ್ನೇ ನೋಡಿದವರು "ಮುಂದಿನ ವರ್ಷ ಬರೆಯುವ ಅಂತ ಇದ್ದೇವೆ ಸರ್" ಅಂದರು. ಏಕೆ? ಈಗ ಏನು ಮಾಡುತ್ತಿದ್ದೀರಿ? ಅಂತ ಕೇಳಿದೆ. ಒಬ್ಬರನೊಬ್ಬರನ್ನು ನೋಡಿಕೊಂಡು "ಸಾರ್ ಹಣಕ್ಕೆ ಚೂರು ಸಮಸ್ಯೆಯಾಗಿದೆ ಹಾಗೆ ಕೆಲಸಕ್ಕೆ ಹೋಗುತ್ತಿ ದ್ದೇವೆ" ಅಂತ ಅಂದರು. ಇಂತಹ ಅನೇಕ ವಿದ್ಯಾರ್ಥಿಗಳು ನಮ್ಮ ಮುಂದೆ ಇದ್ದಾರೆ. ಮನೆಯಲ್ಲಿ ಶಾಲೆಗೆ ಹೋಗುತ್ತೇವೆ ಅಂತ ಬಂದು ನಂತರದಲ್ಲಿ ಬೇರೆ ಕಡೆಯಲ್ಲಿ ಕೆಲಸಕ್ಕೆ ನಿಲ್ಲುತ್ತಾರೆ. ಇಲ್ಲಿ ಹಣದ ಸಮಸ್ಯೆಯಲ್ಲ ಅವರಿಗೆ ಹಣದ ರುಚಿಯೇ ಸಮಸ್ಯೆಯನ್ನು ಉಂಟು ಮಾಡಿದೆ. ದಿನಕ್ಕೆ ಸಿಗುವ ಐದುನೂರು ರೂಪಾಯಿಗಳು ಅವರ ಶೋಕಿ ಬದುಕಿಗೆ ದಾರಿ ಮಾಡಿಕೊಟ್ಟಿದೆ. ಬಹುತೇಕ ಮಕ್ಕಳು ವಿಭಿನ್ನ ಚಟಗಳಿಗೆ ಸಿಕ್ಕು ನಮ್ಮ ವ್ಯಕ್ತಿತ್ವವನ್ನೇ ಹಾಳು ಮಾಡಿಕೊಂಡಿದ್ದಾರೆ. ಹಣ ಗಳಿಸಬೇಕು ಅನ್ನೋ ಮನೋಭಾವವು ಅವರನ್ನು ಶಾಲೆಯಿಂದ, ಪರೀಕ್ಷೆಯಿಂದ ಹೊರಗಿಟ್ಟಿದೆ. ಮಕ್ಕಳ ಧೋರಣೆಯೇ ಹೀಗಿರುವಾಗ ಬಲ್ಲವರ ಬಗ್ಗೆ ಯೋಚಿಸುವುದು ಕಷ್ಟ ಸಾಧ್ಯ ಅನ್ನಿಸುತ್ತದೆ.

ಹಣ ನಮಗೆ ಬೇಕು ಆದರೇ ಅದನ್ನೇ ಗಳಿಸುವುದು ಮಾತ್ರ ನಮ್ಮ ಗುರಿ ಅನ್ನೋ ಮನೋಭಾವ ನಮ್ಮದಾಗಬಾರದು. ಲೋಕದ ಕೇಡುಗಳನ್ನು ನಿಯಂತ್ರಿಸುವುದಕ್ಕೆ ಹಣದ ವ್ಯಾಮೋಹವನ್ನು ನಿಯಂತ್ರಿಸುವುದು ಅಗತ್ಯವಾಗಿದೆ. ಮಕ್ಕಳಲ್ಲಿ ಪುಸ್ತಕದ ಅರಿವಿನ ನೆಲೆಯಿಂದ ಜೀವನ ಸಂಸ್ಕಾರವನ್ನು ನೀಡಬೇಕು ಈ ಸಂಸ್ಕಾರವು ಹಣದ ವಾಸನೆಯಿಂದ ದೂರವಿದ್ದರೇ ನಾವು ಮನುಷ್ಯರಾಗುವುದಕ್ಕೆ ಸಾಧ್ಯವಾಗುತ್ತದೆ.

# ರಾಷ್ಟ್ರೀಯ ಕುಸ್ತಿಪಟು ಗಾಯತ್ರಿ ರಮೇಶ್ ಸುತಾರ್

ಅಣ್ಣನನ್ನು ನೋಡಿ ಕುಸ್ತಿ ಕಲಿಯಬೇಕೆಂಬ ಆಸೆ ಬಾಲ್ಯದಲ್ಲಿಯೇ ಮೂಡಿತು ತಂದೆಯು ಕೂಡ ಪೈಲ್ವಾನರೆ ತಾವುಕಂಡಕನಸನ್ನುಮಕ್ಕಳಿಂದನೆರವೇರಿಸಿಕೊಳ್ಳಬೇಕೆಂಬ ಆಸೆಯನ್ನು ಹೊಂದಿದ್ದ ತಂದೆಯ ಕನಸನ್ನು ನನಸು ಮಾಡಿದ ಗಟ್ಟಿಗಿತ್ತಿ ಹಳಿಯಾಳದ ಕುಸ್ತಿಪಟು ಗಾಯಿತ್ರಿ ರಮೇಶ್ ಸುತಾರ್.

ವೃತ್ತಿಯಲ್ಲಿ ಕಾರ್ಪೆಂಟರ್ ಪ್ರವೃತ್ತಿಯಲ್ಲಿ ಕುಸ್ತಿಪಟು ಹಾಗೂ ಕುಸ್ತಿ ಪ್ರೇಮಿ ನಾನು ಕೆಲಸ ಮಾಡುವಾಗ ನನ್ನ ಇಬ್ಬರ ಮಕ್ಕಳ ನೆನಪು ನನ್ನನ್ನು ಕಾಯಕದಲ್ಲಿ ಎಷ್ಟೇ ದಣಿದರು ಮತ್ತೆ ದುಡಿಯಬೇಕೆಂಬ ಆಸಕ್ತಿ ಹೆಚ್ಚಿಸುತ್ತದೆ ಕಾರಣ ನನ್ನ ಮಕ್ಕಳು ಅಂತಾರಾಷ್ಟ್ರೀಯ ಮಟ್ಟದಲ್ಲಿ ಮಿನುಗಬೇಕು ಆ ಮೂಲಕ ಕುಸ್ತಿ ಕ್ರೀಡೆಯಲ್ಲಿ ರಾಷ್ಟ್ರಧ್ವಜವನ್ನು ಅಂತರಾಷ್ಟ್ರೀಯ ಮಟ್ಟದಲ್ಲಿ ಎತ್ತಿ ಹಿಡಿಯಬೇಕು ಅದಕ್ಕಾಗಿ ಹಗಲಿರುಳು ಶ್ರಮಿಸುತ್ತೇನೆ ಬಂದ ಹಣದಲ್ಲಿ ಮಕ್ಕಳಿಗೆ ದೈಹಿಕ ಪೋಷಣೆಗೆ ಬೇಕಾದ ವಸ್ತುಗಳನ್ನು ಖರೀದಿಸಿ ಕೊಡುತ್ತೇನೆ ನನ್ನ ಕನಸು ಒಂದೇ ಒಲಂಪಿಕ್ನಲ್ಲಿ ಪದಕ ಪಡೆಯಬೇಕು ಎಂದು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ ತಂದೆ ರಮೇಶ್ ಸುತಾರ್.

ಅಣ್ಣ ಮೊದಲೇ ಕುಸ್ತಿಪಟು ಇವರು 5ನೇತರಗತಿ ಓದುವಾಗ 2015ರಲ್ಲಿ ಅಣ್ಣ ಮತ್ತು ಮಂಜುನಾಥ್ ಕುಸ್ತಿ ತರಬೇತುದಾರರು ಇವರ ಸಹಕಾರದೊಂದಿಗೆ ಹಳಿಯಾಳದ ಡಿ ವೈ ಇ ಎಸ್ ಕುಸ್ತಿ ವಸತಿ ನಿಲಯಕ್ಕೆ ಆಯ್ಕೆಗೊಂಡು ರಾಷ್ಟ್ರಮಟ್ಟದಲ್ಲಿ ಭಾಗವಹಿಸಿ ಹಲವು ಪದಕಗಳನ್ನು ಪಡೆದಿದ್ದಾರೆ ಮಹಿಳಾ ಕುಸ್ತಿಪಟು.

ಸದಾಕಾಲ ಪೋಷಕರ ಸಹಕಾರ,ಕುಸ್ತಿ ತರಬೇತುದಾರರ,ಅಣ್ಣನ ಮಾರ್ಗದರ್ಶನ ಈ ಮಟ್ಟದ ಬೆಳವಣಿಗೆಗೆ ಸಹಕಾರಿಯಾಗಿದೆ ಮುಂದೆಯೂ ಅತ್ಯುತ್ತಮವಾಗಿ ತರಬೇತಿಯನ್ನು ಪಡೆದು ಅಂತರಾಷ್ಟ್ರಮಟ್ಟದಲ್ಲಿ ಪದಕ ಗಳಿಸಬೇಕು ನಾಡಿಗೆ ಕೀರ್ತಿ ತರಬೇಕೆಂಬ ಅಭಿಲಾಷೆಯನ್ನು ಹೊಂದಿದ್ದಾರೆ ಗಾಯಿತ್ರಿ.

ತರಬೇತುದಾರರು ಅವರ ಅವಧಿಯಲ್ಲಿ ತರಬೇತಿಯನ್ನು ನೀಡುತ್ತಾರೆ ಕುಸ್ತಿ ವಸತಿ ನಿಲಯ ಹಳಿಯಾಳ ಉತ್ತರ ಕನ್ನಡ ಜಿಲ್ಲಾ ಇಲ್ಲಿ ಉಚಿತ ಊಟ ವಸತಿ ವ್ಯವಸ್ಥೆಯನ್ನು ಕಲ್ಪಿಸಿದ್ದಾರೆ ಇದರ ಜೊತೆಗೆ ಪೋಷಕರು ನೀಡುವ ಸಹಕಾರದಿಂದ ಇನ್ನಷ್ಟು ತರಬೇತಿಯನ್ನು ಮಧ್ಯಾಹ್ನದ ಅವಧಿಯಲ್ಲಿ ಪಡೆಯುತ್ತಿದ್ದು ಪದವಿ ಶಿಕ್ಷಣ ಮುಗಿದ ನಂತರ ಪೊಲೀಸ್ ಅಥವಾ ರೈಲ್ವೆ ಇಲಾಖೆಯನ್ನು ಸೇರಿ ಇನ್ನಷ್ಟು ಸಾಧನೆ ಮಾಡುವ ಆಸೆಯನ್ನು ವ್ಯಕ್ತಪಡಿಸುತ್ತಾರೆ ಸಾಧಕಿ.



ಡಾ.ಸುಧಾಕರ ಜಿ.ಲಕ್ಕವಳ್ಳಿ
ಲೇಖಕರು 8747969381

Scan For Digital Colourful HAMPI TIMES E-paper

ಕೆಲವು ಸಂದರ್ಭಗಳಲ್ಲಿ ತರಬೇತುದಾರರು ಜೊತೆ ಇಲ್ಲದ ಅವಧಿಯಲ್ಲಿ ಕುಸ್ತಿ ಸ್ಪರ್ಧೆಗಳು ಏರ್ಪಟ್ಟಾಗ ತಂದೆ ಮತ್ತು ಅಣ್ಣನ ಮಾರ್ಗದರ್ಶನ ತಾಯಿ ತುಳಸ ರಮೇಶ್ ಸುತಾರ ಆಶೀರ್ವಾದ ಇದು ನನಗೆ ಯಶಸ್ವಿಯಾಗಲು ಸಹಕಾರಿ.

ತರಬೇತಿ ಪಡೆಯುತ್ತಿರುವ, ಮುಂದೆ ಕುಸ್ತಿಪಟುವಾಗಲು ಇಚ್ಛಿಸುವ ಮಹಿಳಾ ಕುಸ್ತಿಪಟುಗಳು ಯಾವುದಕ್ಕೂ ಭಯಪಡದೆ,ಹೆಚ್ಚು ಶ್ರಮಿಸಿ ಕುಸ್ತಿ ಕಲಿಯಬೇಕು ಜೊತೆ ಜೊತೆಗೆ ವಿದ್ಯಾಭ್ಯಾಸದ ಕಡೆಗೆ ಗಮನ ಕೊಡಬೇಕು.



### ಕ್ರೀಡಾ ಸಾಧನೆ ಮತ್ತು ಪ್ರಶಸ್ತಿಗಳು

2022(ಹರಿಯಾಣ–ರೊಥಕ್)ರೆಸ್ಲಿಂಗ್ ಫೆಡರೇಷನ್ ಆಫ್ ಇಂಡಿಯಾ ಇವರ ಸಹಯೋಗದಲ್ಲಿ ನಡೆದ ಕುಸ್ತಿ ಸ್ಪರ್ಧೆಯಲ್ಲಿ 20 ವಯೋಮಿತಿಯ ಒಳಗಿನ 53 ಕೆಜಿ ದೇಹ ತೂಕ ವಿಭಾಗದ ಸ್ಪರ್ಧೆಯಲ್ಲಿ ಚಿನ್ನದ ಪದಕ ಪಡೆದಿರುತ್ತಾರೆ.

2023 (ಹೈದರಾಬಾದ್) ಇಂಡಿಯನ್ ಸ್ಟೈಲ್ ರೆಸ್ಲಿಂಗ್ ಅಸೋಸಿಯೇಷನ್ ಇವರು ಆಯೋಜಿಸಿದ (ಹಿಂದ್ ಕೇಸರಿ) ಕುಸ್ತಿ ಪಂದ್ಯದಲ್ಲಿ 55 ಕೆಜಿ ದೇಹ ತೂಕ ವಿಭಾಗದಲ್ಲಿ ಚಿನ್ನದ ಪದಕ.

2020–23(ದೆಹಲಿ)ಎಸ್ ಜಿ ಎಫ್ ಐ 66 ನೇ ರಾಷ್ಟ್ರೀಯ ಕುಸ್ತಿ ಸ್ಪರ್ಧೆ 59 ಕೆಜಿ ದೇಹ ತೂಕ ವಿಭಾಗದಲ್ಲಿ ಕಂಚಿನ ಪದಕ.

2024(ತಮಿಳುನಾಡು)ಸೌತ್ ಇಂಡಿಯನ್ ಸೀನಿಯರ್ ಕುಸ್ತಿ ಚಾಂಪಿಯನ್ಶಿಪ್ 57 ಕೆಜಿ ದೇಹ ತೂಕ ವಿಭಾಗದಲ್ಲಿ ಚಿನ್ನದ ಪದಕ.

2024(ತಮಿಳುನಾಡು)ಸೌತ್ ಇಂಡಿಯಾ ಸೀನಿಯರ್ ಕುಸ್ತಿ ಚಾಂಪಿಯನ್ಶಿಪ್ 23 ವಯೋಮಿತಿ ಒಳಗಿನ 57 ಕೆಜಿ ದೇಹ ತೂಕ ವಿಭಾಗದಲ್ಲಿ ಚಿನ್ನದ ಪದಕ ಪಡೆದಿರುತ್ತಾರೆ.

ಒಟ್ಟು 12 ಬಾರಿ ಬೇರೆ ಬೇರೆ ರಾಜ್ಯಗಳಲ್ಲಿ ನಡೆದ ರಾಷ್ಟ್ರಮಟ್ಟದ ಕುಸ್ತಿ ಸ್ಪರ್ಧೆಗಳಲ್ಲಿ ಭಾಗವಹಿಸಿ ಕರ್ನಾಟಕಕ್ಕೆ ಕೀರ್ತಿ ತಂದಿರುತ್ತಾರೆ.

2019 ಬೆಳಗಾವಿಯಲ್ಲಿ ನಡೆದ ಕರ್ನಾಟಕ ಪ್ರಥಮ ಕುಸ್ತಿ ಹಬ್ಬದಲ್ಲಿ 46 ಕೆಜಿ ದೇಹ ತೂಕ ವಿಭಾಗದ ಕುಸ್ತಿ ಸ್ಪರ್ಧೆಯಲ್ಲಿ ಮಹಿಳಾ ಬಾಲ ಕೇಸರಿ ಪ್ರಶಸ್ತಿ.

2022 ಬೆಳಗಾವಿಯ ಕಿತ್ತೂರು ಇಲ್ಲಿ ನಡೆದ ಕಿತ್ತೂರು ಉತ್ಸವದಲ್ಲಿ ರಾಣಿ ಚೆನ್ನಮ್ಮ ಕೇಸರಿ ಪ್ರಶಸ್ತಿಯನ್ನು +55 ಕೆಜಿ ದೇಹ ತೂಕ ವಿಭಾಗದ ಕುಸ್ತಿ ಸ್ಪರ್ಧೆಯಲ್ಲಿ ಸ್ಪರ್ಧಿಸಿ ಪಡೆದಿರುತ್ತಾರೆ.

2023 ಹಾವೇರಿ ಜಿಲ್ಲೆಯ ಶಿಗ್ಗಾವಿ ಇಲ್ಲಿ ನಡೆದ ತೃತೀಯ ಕರ್ನಾಟಕ ಕುಸ್ತಿ ಹಬ್ಬದಲ್ಲಿ ಮಹಿಳಾ ಕರ್ನಾಟಕ ಕೇಸರಿ ಪ್ರಶಸ್ತಿಯನ್ನು +57 ಕೆಜಿ ದೇಹ ತೂಕ ವಿಭಾಗದಲ್ಲಿ ಪಡೆದಿರುತ್ತಾರೆ.

ರಾಷ್ಟ್ರೀಯ ಮಹಿಳಾ ದಿನದ ಪ್ರಯುಕ್ತ ಕರ್ನಾಟಕ ಸರ್ಕಾರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಕೊಡಮಾಡುವ ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿ–2025 ಪಡೆದಿರುತ್ತಾರೆ.

ನಾನು ಹೆಣ್ಣು ಮಗಳು ನನ್ನಿಂದ ಸಾಧನೆ ಸಾಧ್ಯವಿಲ್ಲವೆಂಬ ಅಂಜಿಕೆ ಇಲ್ಲದೆ ಮುನ್ನುಗ್ಗಿದರೆ ಸಾಧನೆ ಸಾಧ್ಯ.

ಇಲ್ಲಿಯವರೆಗೂ ಎಲ್ಲಾ ಕುಸ್ತಿ ತರಬೇತುದಾರರು ಸಹಕಾರವನ್ನು ನೀಡಿದ್ದಾರೆ.ತಂದೆಯವರ ಮಾರ್ಗದರ್ಶನ ಸಾಕಷ್ಟು ಸಹಾಯಕ್ಕೆ ಬಂದಿದೆ ಸ್ಥಳೀಯ ಸಂಘ ಸಂಸ್ಥೆಗಳು,ಊರಿನವರು,ಕ್ರೀಡಾ ಪ್ರೇಮಿಗಳು ಹಾಗೂ ಸ್ಥಳೀಯ ಶಾಸಕರು ಸಾಕಷ್ಟು ಸಹಕಾರವನ್ನು ನೀಡಿದ್ದಾರೆ ಅವರಿಗೆ ಕೃತಜ್ಞತೆ ಸಲ್ಲಿಸುವುದನ್ನು ಮರೆಯಲಿಲ್ಲ ಕುಸ್ತಿಪಟು.

ರಾಷ್ಟ್ರೀಯ ಕುಸ್ತಿ ಸ್ಪರ್ಧೆಗಳು ನಡೆಯುವಾಗ ದೂರ ಪ್ರಯಾಣ ಮಾಡಬೇಕಾಗುತ್ತದೆ ಪ್ರಯಾಣ ಮುಗಿದ ನಂತರವೇ ಅಂದರೆ ಮಾರನೇ ದಿನವೇ ಕುಸ್ತಿ ಸ್ಪರ್ಧೆಗಳು ಏರ್ಪಡಿಸಿದಾಗ ಉತ್ತಮ ಪ್ರದರ್ಶನ ಉನ್ನತ ಫಲಿತಾಂಶ ನೀಡಲು ಸಾಧ್ಯವಾಗುವುದಿಲ್ಲ ಆದ್ದರಿಂದ ದಯಮಾಡಿ ಎರಡು ಮೂರು ದಿನಗಳ ಮುಂಚೆಯೇ ಅಲ್ಲಿಗೆ ತೆರಳಿ ವಿಶ್ರಾಂತಿ ಪಡೆದು ಅಲ್ಲಿನ ವಾತಾವರಣಕ್ಕೆ ಹೊಂದಿಕೊಂಡ ನಂತರ ಕುಸ್ತಿ ಸ್ಪರ್ಧೆಗಳು ನಡೆದರೆ ಉತ್ತಮ ಫಲಿತಾಂಶ ನೀಡಲು ಸಹಕಾರಿಯಾಗುತ್ತದೆ ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಆಯೋಜಕರು ಅತ್ತ ಕಡೆ ಗಮನ ಹರಿಸಬೇಕೆಂದು ಅಳಲನ್ನು ತೋಡಿಕೊಳ್ಳುತ್ತಾರೆ ಮಾಜಿ ಪೈಲ್ವಾನ್ ರಮೇಶ್ ಸುತಾರ್.

ನಮ್ಮ ಜಿಲ್ಲೆಯಲ್ಲಿ ಸಾಕಷ್ಟು ಕುಸ್ತಿಪಟುಗಳು ಈಗಾಗಲೇ ಸಾಧನೆ ಮಾಡಿದ್ದಾರೆ,ಮಾಡುತ್ತಿದ್ದಾರೆ. ಅನಿವಾರ್ಯ ಕಾರಣಗಳಿಂದ ಸರ್ಕಾರಿ ನೌಕಾರಿ ಪಡೆಯಲು ಸಾಧ್ಯವಾಗಿಲ್ಲ ಅಂತಹ ಕುಸ್ತಿ ಪಟುಗಳಿಗೆ ಸ್ಥಳೀಯ ಕಂಪನಿಗಳಲ್ಲಿ ಉದ್ಯೋಗ ನೀಡಿದರೆ ಅವರಿಗೂ ಹಾಗೂ ಮುಂದೆ ಅವರ ಕುಟುಂಬದಲ್ಲಿ ಬೆಳೆಯುವ ಕುಸ್ತಿ ಪಟುಗಳಿಗೆ ಅನುಕೂಲವಾಗಲಿದೆ ಆದ್ದರಿಂದ ಸ್ಥಳೀಯ ಕಂಪನಿಗಳ ಮಾಲೀಕರು ಹಾಗೂ ಸ್ಥಳೀಯ ಶಾಸಕರು ನೆರವಾಗಬೇಕು ಎಂಬ ಮನವಿಯನ್ನು ವಿನಮ್ರವಾಗಿ ಸಲ್ಲಿಸುತ್ತಾರೆ.

ಈ ಹಿಂದೆ ಕುಸ್ತಿ ಹಾಸ್ಟೆಲ್ನಲ್ಲಿ ಇದ್ದ ತರಬೇತುದಾರರಾದ ಕಾಡೆಶ್ ನ್ಯಾಮಗೌಡ,ಬಾಲಕೃಷ್ಣ,ಶಿವಪ್ಪ ಉತ್ತಮವಾಗಿ ಕಾರ್ಯವನ್ನು ನಿರ್ವಹಿಸಿದ್ದಾರೆ ಈಗ ತರಬೇತಿ ನೀಡುತ್ತಿರುವ ತುಕಾರಾಂ ಗೌಡ ಇವರು ಸಾಕಷ್ಟು ಶ್ರಮಿಸುತ್ತಿದ್ದು ರಜಾ ಅವಧಿಯಲ್ಲಿಯೂ ಮಕ್ಕಳ ಕಲಿಕೆಗೆ ಪೂರಕವಾಗಿದ್ದಾರೆ ಇವರ ಸಹಕಾರ ಸ್ಮರಣಿಯ ಎಂದು ತಿಳಿಸುತ್ತಾರೆ.

ಸನ್ಮಾನ್ಯ ಶಾಸಕರಾದ ಆರ್ ವಿ ದೇಶಪಾಂಡೆ ರವರು ಕುಸ್ತಿ ಬೆಳವಣಿಗೆಗೆ ಸಹಕರಿಸುತ್ತಿದ್ದು ಇವರೊಂದಿಗೆ ಸ್ಥಳೀಯ ಸಂಘ ಸಂಸ್ಥೆಗಳು ಹಾಗೂ ರಾಜಕೀಯ ಮುಖಂಡರು ಪಕ್ಷಾತೀತವಾಗಿ ಪ್ರೋತ್ಸಾಹ ನೀಡುತ್ತಿರುವುದು ಹಳಿಯಾಳ ದಲ್ಲಿನ ಕುಸ್ತಿ ಬೆಳವಣಿಗೆ ಕಾರಣವಾಗಿದೆ.

ಗಾಯತ್ರಿ ಇವರು ನಮ್ಮ ತರಬೇತಿಯ ನಂತರ ಹೆಚ್ಚು ಶ್ರಮವಹಿಸಿ ಕೌಶಲ್ಯಗಳನ್ನು ಕರಗತ ಮಾಡಿಕೊಳ್ಳುತ್ತಾರೆ ಇವರೊಂದಿಗೆ ಇವರ ತಂದೆ ಹಾಗೂ ಅಣ್ಣನ ಸಹಕಾರ ಇವರ ಈ ಮಟ್ಟದ ಸಾಧನೆಗೆ ಕಾರಣ ಎನ್ನುತ್ತಾರೆ ಅಂತಾರಾಷ್ಟ್ರೀಯ ತರಬೇತುದಾರರಾದ ತುಕಾರಾಂ ಗೌಡ ರವರು.

ತರಬೇತುದಾರರ ಮಾರ್ಗದರ್ಶನ, ತಂದೆ ಹಾಗೂ ಅಣ್ಣ ಶೈಲೇಶ್ ಸಲಹೆ ಶಾಲಾ ಕಾಲೇಜಿನ ಬೋಧಕ ಮತ್ತು ಬೋಧಕೇತರ ವರ್ಗದವರು ಹಾಗೂ ಸರ್ವರ ಸಹಕಾರ ನನ್ನ ಈ ಸಾಧನೆಗೆ ಪ್ರೇರಣೆ ಮುಂದಿನ ದಿನಗಳಲ್ಲಿ ಇನ್ನಷ್ಟು ಕಷ್ಟಪಟ್ಟು ಶ್ರಮಿಸಿ ನಾಡಿಗೆ ಮತ್ತು ರಾಷ್ಟ್ರಕ್ಕೆ ಕೀರ್ತಿ ತರುತ್ತೇನೆ ಎಂದು ತಿಳಿಸುತ್ತಾರೆ ಸಾಧಕಿ.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No. 15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

## ಕವಿ ಮನಸು

### ಭ್ರಮೆ

ನಾವು ನೀವು ಹಾಗೇ ಬದುಕುತ್ತಾ
ಇರುವೆವು ಜೀವಿಸದೆ, ದೊಡ್ಡದಾಗಿ!
ನನ್ನಿಂದಲೇ ಎಂಬ ಹಿರಿಮೆಯಲಿ...!
ರೋಗಗ್ರಸ್ತ ಮನಸ್ಥಿತಿಗಳಲ್ಲಿ,ಕಳ್ಳ
ಮಾರ್ಜಾಲನಂತೆ ಅತ್ತಿಂದಿತ್ತ ಮಿತ್ಯ
ಭ್ರಮೆಯಲಿ....!!!

ನಮ್ಮಹಂ ಕೂರ್ಮವಲ್ಲ ಕುಕ್ಕುಟವು
ತನ್ನಕೂಗಿಂದಲೇ ಅಂತ ವಿಚಾರದ್ರಿ ಹತ್ತಿ
ಜಂಬದಿ ಬೀಗುತ್ತಿದೆ ಕತ್ತು ಚಾಚಿ ಚಂದದಿ
ನೋಡುತ್ತಲಿದೆ ಬಿಂಕದಿ ಅತ್ತ ಇತ್ತ
ಭ್ರಮೆಯ ಉಷೆಯಲಿ!!

ನಾವು ನೀವೆಂಬ ಸತಿ ಪತಿಯು ಸಣ್ಣತನದಿ
ವರ್ತಿಸಿ ತನ್ನಿಂದಲೇ ಕುಟುಂಬವೆಂಬ
ಅಸುಂದರ ಭ್ರಮಾ ಗರಳದೊಳಿಹರು
ಜಗದಿ ಜನರೆಲ್ಲಾ ಮೂಕರಂತೆ,
ದಿಕ್ಕುಗಳಲ್ಲೇ ಅಸೂಯೆಯ ಸೂತಕ!

ಏತಕ್ಕಾಗಿ ನಮ್ಮ ಬದುಕು ಸ್ಪಷ್ಟತೆಯಿಲ್ಲ
ನಮ್ಮ ನಡೆ ಎಂತಹದ್ದು ಅದರೊಳಗೆ
ಅನನ್ಯತೆಯ ಪರಿವಿಲ್ಲ,ಭ್ರಮೆಯ ಪರದೆಯ
ಭೇದಿಸಬೇಕಿದೆ,ನಮ್ಮ ಸತ್ವಹೀನ ಆತ್ಮ
ಜರೆಯ ಕಂಡು ನಿಸ್ತೇಜನಾಗಿಹನು
ಪಶ್ಚಿಮದ ಇನನು!!

– ಶಿವರಾಜ್. ವಿ. ಹೊಸಪೇಟೆ.

## ಮೈಕ್ರೋ ನ್ಯೂಸ್

### ಮಾ. 19 ರಂದು ಕೊಪ್ಪಳ ವಿಶ್ವವಿದ್ಯಾಲಯದ ದ್ವಿತಿಯ ಸಂಸ್ಥಾಪನಾ ದಿನಾಚರಣೆ

ಮೊದಲ ಪುಟದಿಂದ

ಸಂತ ಕವಿ ಕನಕದಾಸ ಮತ್ತು ತತ್ವ ಪದಕಾರರ ಅಧ್ಯಯನ ಕೇಂದ್ರದ ಅಧ್ಯಕ್ಷರಾದ ಕಾ.ತ. ಚಿಕ್ಕಣ್ಣ ಅವರು ಸಮಾರಂಭದ ಉದ್ಘಾಟನೆ ನೆರವೇರಿಸುವರು.

ಕಾರ್ಯಕ್ರಮದಲ್ಲಿ ಪದ್ಮಶ್ರೀ ಪ್ರಶಸ್ತಿಗೆ ಭಾಜರಾದ ಭೀಮವ್ವ ತಿಳ್ಳೇಕ್ಯಾತರ ಅವರಿಗೆ ಗೌರವ ಸನ್ಮಾನ ನಡೆಯಲಿದೆ. ಮುಖ್ಯ ಅತಿಥಿಗಳಾಗಿ ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ಎಸ್.ವಿದ್ಯಾಶಂಕರ್, ದಾವಣಗೆರೆ ವಿಶ್ವವಿದ್ಯಾಲಯ ಕುಲಪತಿಗಳಾದ ಪ್ರೊ. ಬಿ.ಡಿ.ಕುಂಬಾರ, ಬೆಂಗಳೂರಿನ ಜ್ಞಾನ ಭಾರತಿ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ಜಯಕರ ಎಸ್.ಎಂ., ಕೋಲಾರಿನಲ್ಲಿರುವ ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ನಿರಂಜನ ವಾನಳ್ಳಿ, ಮೈಸೂರಿನ ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪದರ್ಶಕ ಕಲೆಗಳ ವಿಶ್ವವಿದ್ಯಾಲಯ ಕುಲಪತಿಗಳಾದ ಪ್ರೊ. ನಾಗೇಶ ವಿ ಬೆಟ್ಟಕೋಟೆ, ಬಳ್ಳಾರಿಯ ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ ಕುಲಪತಿಗಳಾದ ಪ್ರೊ. ಮುನಿರಾಜು ಎಂ., ಗದಗಿನ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ ಕುಲಪತಿಗಳಾದ ಪ್ರೊ. ಸುರೇಶ್ ವಿ ನಾಡಗೌಡರ್, ಬೆಂಗಳೂರಿನ ಭಾಷೆ ಮತ್ತು ಸಾಹಿತ್ಯ ಶಾಲೆ ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯ ನಿರ್ದೇಶಕರಾದ ಪ್ರೊ. ಕೆ.ವೈ. ನಾರಾಯಣ ಸ್ವಾಮಿ, ಬಳ್ಳಾರಿಯ ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದ ಕುಲಸಚಿವರಾದ ಎಸ್. ಎನ್. ರುದ್ರೇಶ ಹಾಗೂ ಪ್ರೊ. ಎನ್.ಎಂಸಾಲಿ ಅವರು ಭಾಗವಹಿಸಲಿದ್ದಾರೆ.

ಸಮಾರಂಭದ ಅಧ್ಯಕ್ಷತೆಯನ್ನು ಕೊಪ್ಪಳ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ಬಿ. ಕೆ. ರವಿ ಅವರು ವಹಿಸಲಿದ್ದಾರೆ ಎಂದು ಕೊಪ್ಪಳ ವಿವಿ ಕುಲಸಚಿವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಅಭಿಮಾನಿಗಳ ಮನದಲ್ಲಿ ಅಪ್ಪು ಶಾಶ್ವತ

ಮೊದಲ ಪುಟದಿಂದ

ಕಾಲೇಜಿನ ವಿಧ್ಯಾರ್ಥಿಗಳು ಸಾಮೂಹಿಕವಾಗಿ ಊಟ ಮಾಡಲು ಸುಮಾರು ಒಂದು ಲಕ್ಷ ರೂಪಾಯಿಗಳ ಧನ ಸಹಾಯ ಮಾಡಿದ್ದು ನಾವು ಸ್ಮರಣೆ ಮಾಡಬೇಕು ಎಂದು ತಿಳಿಸಿದರು. ಇದೇ ಸಂಧರ್ಭದಲ್ಲಿ ಪುನೀತ್ ಅಭಿಮಾನಿ ಬಳಗದ ವತಿಯಿಂದ ಸಾರ್ವಜನಿಕರಿಗೆ ಅನ್ನ ಸಂತರ್ಪಣೆ ಮಾಡಲಾಗಿತ್ತು. ಪುನೀತ್ ಅಭಿಮಾನಿ ಬಳಗದ ಅಜೇಯ್ ನಿರ್ಕಲ್, ಪಪಂ ಸದಸ್ಯರಾದ ಈಶಪ್ಪ, ಸಿರಬಿ ಮಂಜುನಾಥ, ಬಾಸೂ ನಾಯ್ಕ್, ಶಾಸಕರ ಆಪ್ತ ಸಹಾಯಕರಾದ ಮರುಳಸಿದ್ದಪ್ಪ, ಕೆ.ಎನ್. ದಿನಕರ್, ಅಖಿಲ ಭಾರತ ವೀರಶೈವ ಮಹಾಸಭಾದ ತಾಲೂಕು ಅಧ್ಯಕ್ಷ ಸುನೀಲ್ ಗೌಡ, ಡಿಎಸ್ಎಸ್ ಜಿಲ್ಲಾ ಸಂಚಾಲಕ ಎಸ್.ದುರುಗೇಶ್, ಮಂಜುನಾಥ ಸೇರಿದಂತೆ ಅಭಿಮಾನಿಗಳು ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು.

# ದೇವದಾಸಿ ಪದ್ಧತಿ ನಿರ್ಮೂಲನೆಗೆ ಶಿಕ್ಷಣವೇ ಅಸ್ತ್ರ

## ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಮಹಾಂತೇಶ ಸಂಗಪ್ಪ ದರಗದ್ ಹೇಳಿಕೆ | ಕಾನೂನು ಅರಿವು ನೆರವು

■ ಹಂಪಿ ಟೈಮ್ಸ್ ಕೊಪ್ಪಳ

ದೇವದಾಸಿ ಪದ್ಧತಿ ಸಂಪೂರ್ಣವಾಗಿ ನಿರ್ಮೂಲನೆ ಯಾಗಬೇಕೆಂದರೆ ಶಿಕ್ಷಣ ಅತ್ಯಗತ್ಯ. ನಿಮಗೆ ಸಾಧ್ಯವಾದರೆ ಮಕ್ಕಳನ್ನು ಓದಿಸಿ ಇಲ್ಲದಿದ್ದರೇ ಸರ್ಕಾರ ನಡೆಸುವ ವಸತಿ ಶಾಲೆಗಳಿಗೆ ಸೇರಿಸಿಯಾದರು ಮಕ್ಕಳಿಗೆ ಕಡ್ಡಾಯವಾಗಿ ಶಿಕ್ಷಣವನ್ನು ಕೊಡಿಸಿ. ಅಂದಾಗ ಮಾತ್ರ ಈ ಸಮಾಜಕ್ಕೆ ಅಂಟಿಕೊಂಡಿರುವ ಅನಿಷ್ಠ ಪದ್ಧತಿಯನ್ನು ಹೋಗಲಾಡಿಸಲು ಸಾಧ್ಯವಾಗುತ್ತದೆ ಎಂದು ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಮಹಾಂತೇಶ ಸಂಗಪ್ಪ ದರಗದ್ ಹೇಳಿದರು.

ಅವರು ಶನಿವಾರ ಕೊಪ್ಪಳ ತಾಲೂಕಿನ ಶಿವಪೂರ ಗ್ರಾಮದಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಕೊಪ್ಪಳ, ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ಬೆಂಗಳೂರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕೊಪ್ಪಳ. ದೇವದಾಸಿ ಪುನರ್ವಸತಿ ಯೋಜನೆ, ಕೊಪ್ಪಳ ಹಾಗೂ ಗ್ರಾಮ ಪಂಚಾಯತಿ ಶಿವಪೂರ ಇವರ ಸಂಯುಕ್ತ ಆಶ್ರಯದಲ್ಲಿ ಮಾಜಿ ದೇವದಾಸಿ ಮಹಿಳೆಯರಿಗೆ ಏರ್ಪಡಿಸಿದ್ದ ಕಾನೂನು ಅರಿವು ನೇರವು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ದೇವದಾಸಿ ಮಹಿಳೆಯರು ತಮ್ಮ ಮಕ್ಕಳಿಗೆ ಶಿಕ್ಷಣವನ್ನು ಕೊಡಿಸಿದ್ದರೇ ಆದರೆ ಸರ್ಕಾರದಿಂದ ಸೌಲಭ್ಯ ಕೊಡುವಂತೆಬೇರೆಯವರನ್ನುಕೇಳುವಅಗತ್ಯವಿರುವುದಿಲ್ಲ. ನಿಮ್ಮ ಮಕ್ಕಳು ಶಿಕ್ಷಣವನ್ನು ಪಡೆದುಕೊಂಡು ಸುಂದರ ಬದುಕನ್ನು ಕಟ್ಟಿಕೊಳ್ಳುತ್ತಾರೆ. ನೀವು ಯಾರಿಗೂ ತಲೆಬಾಗದಂತೆ ನಿಮ್ಮ ಮಕ್ಕಳು ನಿಮ್ಮನ್ನು ನೋಡಿಕೊಳ್ಳುತ್ತಾರೆ ಎಂದು ನೆರದಿದ್ದ ಮಹಿಳೆಯರಿಗೆ ಕಿವಿ ಮಾತು ಹೇಳಿದರು.



ಉಪನ್ಯಾಸಕರಾಗಿ ವಕೀಲರಾದ ರವಿಚಂದ್ರ ಆರ್. ಮಾಟಲದಿನ್ನಿ ಅವರು ಉಪನ್ಯಾಸ ನೀಡಿ, ದೇವದಾಸಿ ಬಿಡುವ ಪದ್ಧತಿ ನಿಷೇಧ ಮಾಡಿ 43 ವರ್ಷವಾದರು ನಾವು ಇನ್ನು ದೇವದಾಸಿ ಪದ್ಧತಿ ಬಗ್ಗೆ ಮಾತನಾಡುತ್ತಿದ್ದೇವೆ. ಇಂತಹ ಅನಿಷ್ಠ ಪದ್ಧತಿಗೆ ಹೆಣ್ಣು ಮಕ್ಕಳನ್ನು ದೂಡಿದಲ್ಲಿ 2 ರಿಂದ 5 ವರ್ಷ ಕಠಿಣ ಶಿಕ್ಷೆ ವಿಧಿಸಲಾಗುತ್ತದೆ. ಈ ಪದ್ಧತಿಯನ್ನು ನಾವು ಬೇರು ಸಮೇತ ಕಿತ್ತೊಗೆಯಬೇಕು ಎಂದು ಹೇಳಿದರು.

ವಕೀಲರಾದ ಕೆ.ಎಮ್.ಶಿವಪೂರ ಅವರು ಮಾತನಾಡಿ, ಸರ್ಕಾರದಿಂದ ಮಾಜಿ ದೇವದಾಸಿ ಮಹಿಳೆಯರಿಗೆ ಇರುವ ಸೌಲಭ್ಯಗಳು ಪರಿಣಾಮಕಾರಿಯಾಗಿ ಅನುಷ್ಠಾನವಾಗಬೇಕೆಂದು ಹೇಳಿದರು.

ಗ್ರಾಮ ಪಂಚಾಯತಿ ಉಪಾಧ್ಯಕ್ಷರಾದ ವೆಂಕಟೇಶ. ಎನ್. ಚನ್ನದಾಸರ್ ಅವರು ಸ್ಥಳಿಯ ಸಮಸ್ಯೆಗಳ ಕುರಿತು ಮಾತನಾಡಿದರು. ಹಾಗೂ ಶಿವಪೂರ ಗ್ರಾಮದಲ್ಲಿ ಸರ್ಕಾರದ ಜಮೀನನ್ನು ದೇವದಾಸಿ ಮಹಿಳೆಯರಿಗೆ ಒದಗಿಸುವಂತೆ ಕ್ರಮ ಕೈಗೊಳ್ಳಲು ಮನವಿ ಮಾಡಿಕೊಂಡರು.

ಮತ್ತೋರ್ವ ವಕೀಲರಾದ ಕೆ.ಎಸ್. ಮೈಲಾರಪ್ಪ ಅವರು ಬಾಲ್ಯ ವಿವಾಹ ಮತ್ತು ಪೋಕ್ಸೊ ಕಾಯ್ದೆ ಬಗ್ಗೆ ಉಪನ್ಯಾಸ ನೀಡಿದರು. ವಕೀಲರಾದ ಸಂತೋಷ ಬಾದರ ಬಂಡಿ ಅವರು ಸೈಬರ್ ಅಪರಾದದ ಮುಂಜಾಗೃತೆಯ ಬಗ್ಗೆ ವಿವರಿಸಿದರು. ವಕೀಲರಾದ ಜಿ.ಎಮ್. ಶಿವಪೂರ ಅವರು ದೇವದಾಸಿ ಪದ್ಧತಿ ನಿರ್ಮೂಲನೆ ಯಾಗಬೇಕೆಂದರು.

ಸಹಾಯಕ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಶಿವಶರಣಪ್ಪ ಗದ್ದಿ ಅವರು ಇಲಾಖೆಯ ಯೋಜನೆಗಳ ಬಗ್ಗೆ ಮಾಹಿತಿ ನೀಡಿದರು.

ದೇವದಾಸಿ ಪುನರ್ವಸತಿ ಯೋಜನಾಧಿಕಾರಿ ಪೂರ್ಣಿಮಾ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ದೇವದಾಸಿ ಮಹಿಳೆಯರಿಗೆ ಇರುವ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡಿದರು.

ಸಖಿ ಒನ್ ಸ್ಟಾಪ್ ಸೆಂಟರಿನ ಆಡಳಿತಾಧಿಕಾರಿ ಯಮುನಾ ಬೆಸ್ತ ಅವರು ನೊಂದ ಮಹಿಳೆಯರಿಗೆ ನ್ಯಾಯ ಕೊಡಿಸುವಲ್ಲಿ ಇಲಾಖೆ ಸತತ ಪ್ರಯತ್ನ ಮಾಡುತ್ತಿದೆ ಎಂದು ಹೇಳುತ್ತಾ ಪೋಸ್ಟರ್ ಬಿಡುಗಡೆ ಮಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಗ್ರಾಮ ಪಂಚಾಯತಿ ಅಧ್ಯಕ್ಷರಾದ ಚಲಸಾನಿ ರವಿಕುಮಾರ ಮತ್ತು ಸಿ.ಬಿ.ಆರ್. ಪ್ರಸಾದ ಅವರು ವಹಿಸಿದ್ದರು.

ಇದೇ ಸಂದರ್ಭದಲ್ಲಿ ಪಿ.ಡಿ.ಓ ವಾಗೇಶ. ಗ್ರಾಮ ಪಂಚಾಯತಿ ಸದಸ್ಯರಾದ ಹುಲಿಗೆಮ್ಮ, ಯಮನೂರಪ್ಪ ಇತರೆ ಸದಸ್ಯರು ಮತ್ತು ಮಿಷನ್ ಶಕ್ತಿಯ ಫಾತೀಮಾ, ಪಿ.ಐ.ಓ. ರೇಣುಕಾ ಉಪಸ್ಥಿತರಿದರು. ಸಕ್ಕೂಬಾಯಿ ಅವರು ಪ್ರಾರ್ಥಿಸಿದರು, ದಾದೇಸಾಬ ಹಿರೇಮನಿ ಅವರು ಸ್ವಾಗತಿಸಿದರು.

# ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಪಟ್ಟಿ ಪ್ರಕಟ

■ ಹಂಪಿ ಟೈಮ್ಸ್ ಬಳ್ಳಾರಿ

2021ರಲ್ಲಿ ಮುದ್ರಣಗೊಂಡು ಪ್ರಕಟಣೆ ಗೊಂಡ ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿಯಿಂದ ಆಯ್ಕೆಯಾದ ಪುಸ್ತಕಗಳ ಪಟ್ಟಿಯನ್ನು, ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಅಂತರ್ಜಾಲದಲ್ಲಿ ಪ್ರಕಟಿಸಲಾಗಿದೆ ಎಂದು ಬಳ್ಳಾರಿ ನಗರ ಕೇಂದ್ರ ಗ್ರಂಥಾಲಯದ ಮುಖ್ಯ ಗ್ರಂಥಾಲಯಾ ಧಿಕಾರಿ ನರಸಣ್ಣ ಅವರು ತಿಳಿಸಿದ್ದಾರೆ.

2021ರಲ್ಲಿ ಮುದ್ರಣಗೊಂಡ ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿಯಿಂದ ಆಯ್ಕೆಗಾಗಿ ಸ್ವೀಕರಿಸಿದ ಕನ್ನಡ, ಆಂಗ್ಲ ಹಿಂದಿ ಮತ್ತು ಭಾರತೀಯ ಇತರ ಭಾಷಾ ಪುಸ್ತಕಗಳನ್ನು ಆಯ್ಕೆ ಸಮಿತಿ ಮುಂದೆ ಮಂಡಿಸಲಾಗಿತ್ತು. ಆಯ್ಕೆ ಸಮಿತಿಯು ಆಯ್ಕೆ ಪ್ರಕ್ರಿಯೆಯನ್ನು ಪೂರ್ಣಗೊಳಿಸಿದ್ದು, ಆಯ್ಕೆಯಾದ ಪುಸ್ತಕಗಳನ್ನು ಇಲಾಖೆಯ ಜಾಲತಾಣ dpl.karnataka.gov.in ರಲ್ಲಿ ಮಾ.15 ರಂದು ಪ್ರಕಟಿಸಲಾಗಿದೆ.

ಲೇಖಕರು, ಲೇಖಕ–ಪ್ರಕಾಶಕರು ಮತ್ತು ಪ್ರಕಾಶಕರು ಮತ್ತು ಪುಸ್ತಕ ಸರಬರಾಜುದಾರರು ಸಲ್ಲಿಸಿದ ಪುಸ್ತಕಗಳ ಹೆಸರು, ಲೇಖಕರ ಹೆಸರು, ಪುಟ ಸಂಖ್ಯೆ ಮುಖ ಬೆಲೆ, ನಿಗದಿತ ಬೆಲೆ, ಪುಸ್ತಕ ಅಳತೆ ಹಾಗೂ ಇತರೆ ತಾಂತ್ರಿಕ ವ್ಯತ್ಯಾಸಗಳಿದ್ದಲ್ಲಿ ಮಾ.18 ರೊಳಗಾಗಿ ಆಯುಕ್ತರು, ಸಾರ್ವಜನಿಕ ಗ್ರಂಥಾಲಯ ಇಲಾಖೆ, ವಿಶ್ವೇಶ್ವರಯ್ಯ ಮುಖ್ಯಗೋಪುರ, 4ನೇ ಮಹಡಿ, ಡಾ. ಅಂಬೇಡ್ಕರ್ ವೀದಿ, ಬೆಂಗಳೂರು–560001. ಇಲ್ಲಿಗೆ ಲಿಖಿತವಾಗಿ ಅಥವಾ ಇ–ಮೇಲ್ ಮೂಲಕ ಮನವಿಗಳನ್ನು ಸಲ್ಲಿಸ ಬಹುದಾಗಿದೆ. ನಂತರ ಬಂದ ಮನವಿಗಳನ್ನು ಯಾವುದೇ ಕಾರಣಕ್ಕೂ ಪರಿಗಣಿ ಸಲಾಗುವುದಿಲ್ಲ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ

# ನಾರಿ–ಕಿಲ್ಪ್ ಮಹಿಳಾ ಗಣತಿದಾರರಿಗೆ ತರಬೇತಿ

■ ಹಂಪಿ ಟೈಮ್ಸ್ ಬಳ್ಳಾರಿ

ಕಡು ಬಡತನದ ಕುಟುಂಬಗಳಿಗೆ ಸರ್ಕಾರದ ಯೋಜನೆಗಳ ಮಾಹಿತಿ ನೀಡಿ ಅವರ ಜೀವನೋ ಪಾಯವನ್ನು ಸುಧಾರಿಸಿ ಬಡತನದಿಂದ ಹೊರಬರು ವಂತೆ ಮಾಡುವುದು ನಾರಿ–ಕಿಲ್ಪ್ ಯೋಜನೆಯ ಉದ್ದೇಶವಾಗಿದೆ ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಹಮ್ಮದ್ ಹ್ಯಾರಿಸ್ ಸುಮೈರ್ ಹೇಳಿದರು.

ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಸಂಜೀವಿನಿ–ಕೆಎಸ್ಆರ್ಎಲ್ಪಿಎಸ್ ಅಭಿಯಾನದಡಿ ನಾರಿ–ಕಿಲ್ಪ್ ಯೋಜನೆಯ ಕುರಿತು ಸ್ವಸಹಾಯ ಗುಂಪಿನ ಮಹಿಳೆಯರಿಗೆ ಜಿಲ್ಲಾ ಪಂಚಾಯತ್‌ನ ಜಿಲ್ಲಾ ಸಂಪನ್ಮೂಲ ಕೇಂದ್ರದಲ್ಲಿ ಇತ್ತೀಚೆಗೆ ಆಯೋಜಿಸಿದ್ದ ನಾಲ್ಕು ದಿನಗಳ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.


ನಾರಿ–ಕಿಲ್ಪ್ ಕಾರ್ಯಕ್ರಮವನ್ನು ಮೊದಲ ಹಂತದಲ್ಲಿ ಜಿಲ್ಲೆಯ 2 ತಾಲ್ಲೂಕುಗಳಲ್ಲಿ ಅನುಷ್ಠಾನಗೊಳಿಸ ಲಾಗುತ್ತಿದೆ. ಇದರಲ್ಲಿ ಅತೀ ಬಡವರನ್ನು ಗುರಿಯಾಗಿಸಿ, ಅಂತಹ ಕುಟುಂಬಗಳ ಗುರುತಿಸುವಿಕೆಗೆ ಸಂಬಂಧಿಸಿದ ಚಟುವಟಿಕೆಗಳನ್ನು (ಪಿಆರ್ಎ ಮನೆ–ಮನೆ ಸಮೀಕ್ಷೆ) ಕೈಗೊಳ್ಳಲು ಪ್ರತಿ ಗ್ರಾಮ ಪಂಚಾಯತಿಗೆ ಇಬ್ಬರಂತೆ ಸ್ವ–ಸಹಾಯ ಸಂಘದ ಸದಸ್ಯರನ್ನು ಆಯ್ಕೆ ಮಾಡಿ ಅವರಿಗೆ 4 ದಿನಗಳ ಕ್ಷೇತ್ರ ಭೇಟಿ ಒಳಗೊಂಡಂತೆ ತರಬೇತಿ ನೀಡಲಾಗುತ್ತದೆ ಎಂದು ತಿಳಿಸಿದರು.

ಜಿಲ್ಲೆಯ 2 ತಾಲ್ಲೂಕಿನ ಪ್ರತಿ ಗ್ರಾಮ ಪಂಚಾಯತಿಯಿಂದ ಇಬ್ಬರಂತೆ ಸ್ವ–ಸಹಾಯ ಗುಂಪಿನ ಮಹಿಳೆಯರಿಗೆ ತರಬೇತಿ ನೀಡಲಾಗಿದೆ ಎಂದರು. ಜಿಪಂ ಉಪಕಾರ್ಯದರ್ಶಿ ಗಿರಿಜಾ ಶಂಕರ್, ಜಿಪಂ ಮುಖ್ಯ ಯೋಜನಾಧಿಕಾರಿ ವಾಗೀಶ್ ಶಿವಾಚಾರ್ಯ ಇತರರು ಹಾಜರಿದ್ದರು.

# ವಿಶ್ವಕ್ಕೆ ವಚನ ಸಾಹಿತ್ಯ ಕೊಡುಗೆ ಅಪಾರ

■ ಹಂಪಿ ಟೈಮ್ಸ್ ಕೊಟ್ಟೂರು

ಸರಳ ಕನ್ನಡ ಭಾಷೆಯಲ್ಲಿ 12ನೇ ಶತಮಾನದಲ್ಲಿ ಅಸಂಖ್ಯಾತ ಶರಣರಿಂದ ರಚನೆಯಾಗಿರುವ ವಚನ ಸಾಹಿತ್ಯ ಇಡೀ ವಿಶ್ವಕ್ಕೆ ಕೊಟ್ಟಿರುವ ದೊಡ್ಡ ಕೊಡುಗೆಯಾಗಿದೆ ಎಂದು ಕನ್ನಡ ಪ್ರಾಧ್ಯಾಪಕಿ ಸಿ.ಎಂ. ಸಿಂಧು ಗಿರೀಶ ಹೇಳಿದರು.




ಪಟ್ಟಣದ ಕೊಟ್ಟೂರು ಕಟ್ಟೇಮನಿ ಭೂತ ಬುಜಂಗ ಹಿರೇಮಠದಲ್ಲಿ ಭಾನುವಾರ ತಾಲೂಕು ಶರಣ ಸಾಹಿತ್ಯ ಪರಿಷತ್ ಆಯೋಜಿಸಿದ್ದ ಲಿಂ.ಶ್ರೀಮತಿ ಸೊನ್ನದ ಮರುಡಿ ಮಠದ ಬಸಮ್ಮ ಎಸ್.ಎಂ. ಕೊಟ್ರಯ್ಯ ದತ್ತಿ ಕಾರ್ಯಕ್ರಮದಲ್ಲಿ 12ನೇ ಶತಮಾನದ ಬಸವ ದರ್ಶನ ಕುರಿತು ಅವರು ಮಾತನಾಡಿದರು. ಬಸವಣ್ಣನವರ ಅಂದಿನ ಸಾಮಾಜಿಕ ನ್ಯಾಯ ಇಂದಿಗೂ ಮಾದರಿಯಾಗಿದೆ. ವ್ಯಕ್ತಿ ಮತ್ತು ಸಮಾಜ ಕಲ್ಯಾಣ ಎಂಬ ಎರಡು ಗಿರಿಯನ್ನು ಒಳಗೊಂಡಿರುವುದೇ ವಚನ ಸಾಹಿತ್ಯವಾಗಿದೆ. 24700 ವಚನಗಳನ್ನು ಶರಣರು ರಚಿಸಿದ್ದರು. ಬಸವಣ್ಣನವರು 1.90 ಲಕ್ಷ ಜಂಗಮರನ್ನು ಕಲ್ಯಾಣಕ್ಕೆ ಕರೆ ತಂದಿದ್ದರು.

ಬಸವಣ್ಣ ಮತ್ತು ಅವರ ವಚನ ಸಾಹಿತ್ಯವನ್ನು ಟೀಕಿಸುವ ಅನೇಕ ಕಾರ್ಯಗಳು ಬಹು ಹಿಂದಿನಿಂದಲೂ ನಡೆದಿದ್ದವು. ಆದರೆ ಬಸವಣ್ಣನವರ ಕಲ್ಯಾಣ ಕ್ರಾಂತಿಯನ್ನು ಯಾರಿಂದಲೂ ಅಳಿಸಲು ಸಾಧುವಿಲ್ಲ ಎಂದರು.

ನಿವೃತ್ತ ಎಇಒ, ದತ್ತಿ ದಾನಿ ಎಚ್. ಹಾಲಯ್ಯ ಉದ್ಘಾಟಿಸಿದರು. ತಾಲೂಕು ಶಸಾಪ ಅಧ್ಯಕ್ಷ ದೇವರಮನಿ ಕರಿಯಪ್ಪ ಅಧ್ಯಕ್ಷತೆ ವಹಿಸಿದ್ದರು.

ಪರಿಷತ್ ಖಜಾಂಚಿ ಎ.ಚಂದ್ರಣ್ಣ, ತಾಲೂಕು ಕ.ಸಾ.ಪ.ಅಧ್ಯಕ್ಷ ದೇವರಮನಿ ಕೊಟ್ರೇಶ್, ನಿವೃತ್ತ ಸಂಸ್ಕೃತ ಉಪನ್ಯಾಸಕ ಡಿ.ಕೊಟ್ರೇಶ್, ತಾಲೂಕು ಕದಳಿ ಮಹಿಳಾ ವೇದಿಕೆ ಅಧ್ಯಕ್ಷೆ ಎಂ.ಸುಜಾತ ಮಾತನಾಡಿದರು. ಪರಿಷತ್‌ನ ಉಪಾಧ್ಯಕ್ಷೆ ಎಸ್. ಎಂ.ನಳಿನ ದತ್ತಿ ಪರಿಚಯ ಮಾಡಿದರು. ಸದಸ್ಯ ಮತ್ತಿಹಳ್ಳಿ ನಾಗರಾಜ, ಪ್ರಧಾನ ಕಾರ್ಯದರ್ಶಿ ಹೊಂಬಾಳೆ ಮಂಜುನಾಥ, ಸಹ ಕಾರ್ಯದರ್ಶಿ ಜಿ.ಸಿದ್ದಣ್ಣ ನಿರ್ವಹಿಸಿದರು.

# ರಾಜ್ಯಪಾಲರಿಂದ ಪ್ರತಿಭಾವಂತ ಮಕ್ಕಳಿಗೆ ಪ್ರಶಸ್ತಿ ಪತ್ರ ಪ್ರದಾನ




ಭಾರತ್ ಸ್ಕೌಟ್ ಮತ್ತು ಗೈಡ್ಸ್ ರಾಜ್ಯ ಸಂಸ್ಥೆ ವತಿಯಿಂದ ರಾಜಭವನ ಗಾಜಿನ ಮನೆ ಬೆಂಗಳೂರಿನಲ್ಲಿ ಸೋಮವಾರ ನಡೆದ 2023–24ನೇ ಸಾಲಿನ ರಾಜ್ಯ ಪುರಸ್ಕಾರ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿಜಯನಗರ ಜಿಲ್ಲೆಯ ಮಕ್ಕಳಾದ ಸಿದ್ದಲಿಂಗಯ್ಯ(ರೋವರ್), ಸುನಿಲ್(ಸ್ಕೌಟ್), ಶ್ರೀ ಹರಿ (ಕಬ್) ಪಲ್ಲವಿ(ಬುಲ್ ಬುಲ್), ಪ್ರಕೃತಿ(ಗೈಡ್)ಗೆ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ರಾಜ್ಯ ಪುರಸ್ಕಾರ ಪ್ರಮಾಣ ಪತ್ರಗಳನ್ನು ನೀಡಿ ಅಭಿನಂದಿಸಿದರು. ಈ ಸಂದರ್ಭದಲ್ಲಿ ವಿಧಾನಪರಿಷತ್ ಸಭಾಧ್ಯಕ್ಷರಾದ ಯು.ಟಿ ಖಾದರ್, ರಾಜ್ಯ ಮುಖ್ಯ ಆಯುಕ್ತರಾದ ಪಿ ಜಿ ಆರ್ ಸಿಂಧ್ಯಾ, ಉಪಾಧ್ಯಕ್ಷರಾದ ಷಣ್ಮುಖಪ್ಪ ಕೆಬಿ, ರಾಜ್ಯ ಸ್ಕೌಟ್ ಆಯುಕ್ತಾರಾದ ಖಾಲಿದ್, ರಾಜ್ಯ ಗೈಡ್ ಆಯುಕ್ತರು ಶ್ರೀಮತಿ ಗೀತಾ ನಟರಾಜ್, ರಾಜ್ಯ ಕಾರ್ಯದರ್ಶಿ ಗಂಗಪ್ಪ ಗೌಡ ಮತ್ತಿತರರಿದ್ದರು...


ಕರ್ನಾಟಕ ಸರ್ಕಾರ

**ಮೀನುಗಾರಿಕೆ ಇಲಾಖೆ**

**ಮೀನುಗಾರಿಕೆ ಉಪ ನಿರ್ದೇಶಕರು, ವಿಜಯನಗರ ಜಿಲ್ಲೆ**
**ಕೊಂಡನಾಯಕನ ಹಳ್ಳಿ, ಹೊಸಪೇಟೆ. ವಿಜಯನಗರ ಜಿಲ್ಲೆ –583239**
E-mail ID: ddfvijayanagar@gmail.com

ಸಂಖ್ಯೆ:ವಾಹೊಗು/01/2024–25 ದಿನಾಂಕ:14/03/2025

**ಟೆಂಡರ್ ಪ್ರಕಟಣೆ**

ಮೀನುಗಾರಿಕೆ ಉಪ ನಿರ್ದೇಶಕರು, ವಿಜಯನಗರ ಜಿಲ್ಲಾ ಕಛೇರಿಯ ಉಪಯೋಗಕ್ಕಾಗಿ 2025–26ನೇ ಸಾಲಿನ ಅವಧಿಗೆ ದಿನಾಂಕ:01/04/2025 ರಿಂದ 31/03/2026 ರವರೆಗೆ ಒಂದು ಸುಸಜ್ಜಿತವಾದ ಹಾಗೂ ಉತ್ತಮ ಸ್ಥಿತಿಯಲ್ಲಿರುವ ಮಹೇಂದ್ರ ಸ್ಕಾರ್ಪಿಯೋ/ಮಹಿಂದ್ರ ಬೋಲೆರೋ/ಟಾಟಾ ಹ್ಯಾರಿಯಾರ್ ಕಾರನ್ನು ನುರಿತ ಚಾಲಕನೊಂದಿಗೆ ಹೊರಗುತಿಗೆ ಆಧಾರದ ಮೇಲೆ ಒದಗಿಸಲು ಅಲ್ಪಾವಧಿ ಟೆಂಡರ್ ಕರೆಯಲಾಗಿದೆ.
**ಟೆಂಡರ್ ವಿವರ ಈ ಕೆಳಗಿನಂತಿದೆ**

| | | |
|---|---|---|
| 1 | ವಾಹನ ಬಾಡಿಗೆ ಟೆಂಡರ್‌ನ ಗರಿಷ್ಟ ಮೊತ್ತ ರೂ. (ದಿನಾಂಕ: 01/04/2025 ರಿಂದ 31/03/2026 ರವರೆಗೆ) | ಮಾಸಿಕ ಗರಿಷ್ಟ : 40,000/– (ಎ.ಸಿ. ಸಹಿತ ವಾಹನ) |
| 2 | ಟೆಂಡರ್ ಫಾರಂ ಕೊಡುವ ದಿನಾಂಕ | ದಿನಾಂಕ:15/03/2025 ರಿಂದ ದಿನಾಂಕ:28/03/2025 ವರೆಗೆ ರಜಾ ದಿನಗಳನ್ನು ಹೊರತುಪಡಿಸಿ ಬೆಳಿಗ್ಗೆ 10.30 ರಿಂದ ಸಾಯಂಕಾಲ 4.00 ಗಂಟೆಯವರಿಗೆ. |
| 3 | ಟೆಂಡರ್ ಫಾರಂನ್ನು ಅಗತ್ಯ ದಾಖಲೆಗಳೊಂದಿಗೆ ಸಲ್ಲಿಸಲು ಕೊನೆಯ ದಿನಾಂಕ | 28/03/2025 ಸಂಜೆ 4.00 ಗಂಟೆಯ ವರೆಗೆ |
| 4 | ಟೆಂಡರ್ ತೆರೆಯುವ ದಿನಾಂಕ | ದಿನಾಂಕ:29/03/2025 ರಂದು ಪೂರ್ವಾಹ್ನ 11.00 ಗಂಟೆಗೆ (ಮೀನುಗಾರಿಕೆ ಉಪ ನಿರ್ದೇಶಕರು, ವಿಜಯನಗರ ರವರ ಸಮ್ಮುಖದಲ್ಲಿ ತೆರೆಯಲಾಗುವುದು) |
| 5 | ಇ.ಎಂ.ಡಿ (ಮುಂಗಡ ಠೇವಣಿ) | ರೂ. 10,000/– ಮೊತ್ತದ ರಾಷ್ಟ್ರೀಕೃತ ಬ್ಯಾಂಕಿನಿಂದ ಡಿ.ಡಿ. ಅನ್ನು ಮೀನುಗಾರಿಕೆ ಸಹಾಯಕ ನಿರ್ದೇಶಕರು, ಹೊಸಪೇಟೆ ಇವರ ಹೆಸರಿಗೆ ಪಡೆದು ಸಲ್ಲಿಸತಕ್ಕದ್ದು. |

**ಸೂಚನೆ:** ಟೆಂಡರ್ ಅಧಿಸೂಚನೆಯ ಮಾಹಿತಿಯ ವಿವರ ಮತ್ತು ಇತರೆ ನಿಯಮಗಳ ಬಗ್ಗೆ ಈ ಕಛೇರಿಗೆ ಸಂಪರ್ಕಿಸಿ ಮಾಹಿತಿಯನ್ನು ಪಡೆದುಕೊಳ್ಳಬಹುದು.

ಸಹಿ/– **ಮೀನುಗಾರಿಕೆ ಉಪ ನಿರ್ದೇಶಕರು**
**ವಿಜಯನಗರ**

ಕರ್ನಾಟಕ ಸರ್ಕಾರ

**ಮೀನುಗಾರಿಕೆ ಇಲಾಖೆ**

**ಮೀನುಗಾರಿಕೆ ಸಹಾಯಕ ನಿರ್ದೇಶಕರ ಕಛೇರಿ, ಸಾಯಿಬಾಬಾ ದೇವಸ್ಥಾನ ಹತ್ತಿರ,**
**ಕೊಂಡನಾಯಕನ ಹಳ್ಳಿ, ಹೊಸಪೇಟೆ. ವಿಜಯನಗರ ಜಿಲ್ಲೆ –583239**
E-mail ID: adfhpt201@gmail.com

ಸಂಖ್ಯೆ:ವಾಹೊಗು/01/2024–25 ದಿನಾಂಕ:14/03/2025

**ಟೆಂಡರ್ ಪ್ರಕಟಣೆ**

ಮೀನುಗಾರಿಕೆ ಸಹಾಯಕ ನಿರ್ದೇಶಕರು, ಹೊಸಪೇಟೆ ತಾಲ್ಲೂಕು ಕಛೇರಿಯ ಉಪಯೋಗಕ್ಕಾಗಿ 2025–26ನೇ ಸಾಲಿನ ಅವಧಿಗೆ ದಿನಾಂಕ:01/04/2025 ರಿಂದ 31/03/2026 ರವರೆಗೆ 2019 ರ ನಂತರದ ಮಾಡೆಲ್‌ನ ಒಂದು ಸುಸಜ್ಜಿತವಾದ ಹಾಗೂ ಉತ್ತಮ ಸ್ಥಿತಿಯಲ್ಲಿರುವ ಮಹೇಂದ್ರ ಬೋಲೆರೋ ಅಥವಾ ಟಾಟಾ ಬೋಲ್ಟ್/ಇಂಡಿಗೋ/ಟಯೋಟೋ ಇಟಿಯೋಸ್/ಮಾರುತಿ ಶಿಫ್ಟ್ ಡಿಸೈರ್ ಕಾರನ್ನು ನುರಿತ ಚಾಲಕನೊಂದಿಗೆ ಹೊರಗುತ್ತಿಗೆ ಆಧಾರದ ಮೇಲೆ ಒದಗಿಸಲು ಅಲ್ಪಾವಧಿ ಟೆಂಡರ್ ಕರೆಯಲಾಗಿದೆ.
**ಟೆಂಡರ್ ವಿವರ ಈ ಕೆಳಗಿನಂತಿದೆ**

| | | |
|---|---|---|
| 1 | ವಾಹನ ಬಾಡಿಗೆ ಟೆಂಡರ್‌ನ ಗರಿಷ್ಟ ಮೊತ್ತ ರೂ. (ದಿನಾಂಕ: 01/04/2025 ರಿಂದ 31/03/2026 ರವರೆಗೆ) | ಮಾಸಿಕ ಗರಿಷ್ಟ : 40,000/– (ಎ.ಸಿ. ಸಹಿತ ವಾಹನ) |
| 2 | ಟೆಂಡರ್ ಫಾರಂ ಕೊಡುವ ದಿನಾಂಕ | ದಿನಾಂಕ:15/03/2025 ರಿಂದ ದಿನಾಂಕ:28/03/2025 ವರೆಗೆ ರಜಾ ದಿನಗಳನ್ನು ಹೊರತುಪಡಿಸಿ ಬೆಳಿಗ್ಗೆ 10.30 ರಿಂದ ಸಾಯಂಕಾಲ 4.00 ಗಂಟೆಯವರಿಗೆ. |
| 3 | ಟೆಂಡರ್ ಫಾರಂನ್ನು ಅಗತ್ಯ ದಾಖಲೆಗಳೊಂದಿಗೆ ಸಲ್ಲಿಸಲು ಕೊನೆಯ ದಿನಾಂಕ | 28/03/2025 ಸಂಜೆ 4.00 ಗಂಟೆಯ ವರೆಗೆ |
| 4 | ಟೆಂಡರ್ ತೆರೆಯುವ ದಿನಾಂಕ | ದಿನಾಂಕ:29/03/2025 ರಂದು ಪೂರ್ವಾಹ್ನ 11.00 ಗಂಟೆಗೆ (ಮೀನುಗಾರಿಕೆ ಉಪ ನಿರ್ದೇಶಕರು, ವಿಜಯನಗರ ರವರ ಸಮ್ಮುಖದಲ್ಲಿ ತೆರೆಯಲಾಗುವುದು) |
| 5 | ಇ.ಎಂ.ಡಿ (ಮುಂಗಡ ಠೇವಣಿ) | ರೂ. 10,000/– ಮೊತ್ತದ ರಾಷ್ಟ್ರೀಕೃತ ಬ್ಯಾಂಕಿನಿಂದ ಡಿ.ಡಿ. ಅನ್ನು ಮೀನುಗಾರಿಕೆ ಸಹಾಯಕ ನಿರ್ದೇಶಕರು, ಹೊಸಪೇಟೆ ಇವರ ಹೆಸರಿಗೆ ಪಡೆದು ಸಲ್ಲಿಸತಕ್ಕದ್ದು. |

**ಸೂಚನೆ:** ಟೆಂಡರ್ ಅಧಿಸೂಚನೆಯ ಮಾಹಿತಿಯ ವಿವರ ಮತ್ತು ಇತರೆ ನಿಯಮಗಳ ಬಗ್ಗೆ ಈ ಕಛೇರಿಗೆ ಸಂಪರ್ಕಿಸಿ ಮಾಹಿತಿಯನ್ನು ಪಡೆದುಕೊಳ್ಳಬಹುದು.

ಸಹಿ/– **ಮೀನುಗಾರಿಕೆ ಸಹಾಯಕ ನಿರ್ದೇಶಕರು**
**ಹೊಸಪೇಟೆ**

# ಕೊಪ್ಪಳ ಜನರ ಧ್ವನಿ ಕೇಳೋರ್‍ಯಾರು?

■ ಅನುಷಾ. ಜಿ. ಜೋಷಿ.

ಬಿ.ಎಸ್.ಪಿ.ಎಲ್ ಎಂದರೆ ಬಲ್ಡೋಟ ಸ್ಟೀಲ್ ಪವರ್ ಲಿಮಿಟೆಡ್. ಇದೊಂದು 10.5 ಮಿಲಿಯನ್ ಉತ್ಪಾದನೆಯ ಕೊಪ್ಪಳ ತಾಲೂಕಿನಲ್ಲಿ ಸ್ಥಾಪಿಸಲು ಪ್ರಸ್ತಾಪಿಸಿದ್ದರು. ಹಾಗೆಯೇ ಇದನ್ನು ಸ್ಥಾಪಿಸಲು ಕೃಷಿ ಭೂಮಿಯನ್ನು ಕೂಡ ಬಲ್ಡೋಟ ಸ್ಟೀಲ್ ಪವರ್ ಲಿಮಿಟೆಡ್ ಗೋಸ್ಕರ ಖರೀದಿಸಿದ್ದರು. ಈ ಜಾಗವು ಹೊಸಪೇಟೆ ಮತ್ತು ಹುಬ್ಬಳ್ಳಿ ಹೆದ್ದಾರಿಯಲ್ಲಿ ಬರುತ್ತದೆ, ಹಾಗಾಗಿ ಇದರ ಉದ್ದೇಶ ಸಾರಿಗೆ ಸಂಪರ್ಕ ಸರಾಗವಾಗಿದೆ ಮತ್ತು ಇಲ್ಲಿಯ ಜನರಿಗೆ ಉದ್ಯೋಗ ಸೃಷ್ಟಿಯಾಗುತ್ತದೆ ಎಂದು. ಇದಕ್ಕೆ ಸರ್ಕಾರದಿಂದ ಅನುಮೋದನೆ ಕೂಡ ನೀಡಲಾಗಿತ್ತು ಮತ್ತು ಬಹುತೇಕ ಕಾಮಗಾರಿ ಪ್ರಾರಂಭವಾಗಿತ್ತು. ಇದರಿಂದ ಆಗುವ ನಿರ್ಜಲೀಕರಣ, ಪರಿಸರ ಮಾಲಿನ್ಯ ಮತ್ತು ಜನರ ಆರೋಗ್ಯದ ಹಿತಾಸಕ್ತಿಗೋಸ್ಕರ ಜನರು, ಸಂಘಟನೆಗಳು ಮತ್ತು ಇಲ್ಲಿಯ ಸಂಘ-ಸಂಸ್ಥೆಗಳು ಇದರಿಂದ 30 ರಿಂದ 40 ಕಿಲೋಮೀಟರ್ ದೂರದವರೆಗೆ ಧೂಳಿನ ಕಣಗಳು ಹರಡುತ್ತವೆ ಎಂದು ತಿಳಿದು, ಇಲ್ಲಿಯ ಮಹಾಸ್ವಾಮಿಗಳಾದ ಶ್ರೀ ಅಭಿನವ ಗವಿಸಿದ್ದೇಶ್ವರ ಸ್ವಾಮಿಗಳ ಸಮ್ಮುಖದಲ್ಲಿ ಈ ಚಿತ್ರಣವನ್ನು ಇರಿಸಿದರು. ಅವರು ಇದಕ್ಕೆ ವಿರೋಧ ವ್ಯಕ್ತಪಡಿಸಿದರು, ತದನಂತರ ಕಾರ್ಖಾನೆ ಅಧಿಕಾರಿಗಳು ಜಪಾನೀಸ್ ತಂತ್ರಜ್ಞಾನ ಬಳಸಿ ವಾಯು ಮಾಲಿನ್ಯ ತಡೆ ಹಿಡಿಯಲಾಗುವುದು ಎಂದು ವಾದ ಮಂಡಿಸಿದರು, ಶ್ರೀ ಮಹಾಸ್ವಾಮಿಗಳು ಅದಕ್ಕೆ ಈಗಾಗಲೇ ಕೊಪ್ಪಳದಲ್ಲಿರುವ 30 ಕಾರ್ಖಾನೆಗಳ ವಾಯುಮಾಲಿನ್ಯವನ್ನು ಜಪಾನೀಸ್ ತಂತ್ರಜ್ಞಾನ ಬಳಸಿ ನಿಲ್ಲಿಸಿ. ಈಗ ಇಲ್ಲಿ ಯಾವುದೇ ಕಾರ್ಖಾನೆ ಅವಶ್ಯಕತೆ ಇರುವುದಿಲ್ಲ. ಏಕೆಂದರೆ ಇಲ್ಲಿ ಈಗಾಗಲೇ 30ರಷ್ಟು ಕಾರ್ಖಾನೆಗಳು ಕೊಪ್ಪಳ ತಾಲೂಕು ವನ್ನು ಸುತ್ತುವರೆದಿವೆ. ಅಲ್ಲಿಯ ವರದಿಯ ಪ್ರಕಾರ ಗಳಿಂದ ಅಸ್ತಮಾ ಕ್ಯಾನ್ಸರ್ ನಂತಹ ಮಾರಕ ಕಾಯಿಲೆಗಳಿಗೆ ತುತ್ತಾಗುತ್ತಿದ್ದಾರೆ ಹಾಗೂ ಅಲ್ಲಿ ಜನಿಸುವ ಮಕ್ಕಳು ಬುದ್ಧಿಮಾಂದ್ಯ ಮತ್ತು ವಿಕಲಚೇತನರಾಗಿರುತ್ತಾರೆ ಈಗ ಆ ಜನರಲ್ಲಿ ಔಷುದೋಪ ಚಾರಕ್ಕೂ ಹಣ ಇಲ್ಲದಂತಾಗಿದೆ. ಹಾಗಾಗಿ ಈ ಕಾರ್ಖಾನೆಯನ್ನು ಸ್ಥಾಪಿಸುವುದು ಬೇಡ ಎಂದು ಕೊಪ್ಪಳವನ್ನು ಫೆಬ್ರವರಿ 24 ರಂದು ಬಂದ್ ಕೂಡ ಮಾಡಲಾಗಿತ್ತು, ಆದರೂ ಕಾರ್ಖಾನೆಯ ಚಟುವಟಿಕೆಗಳು ಮುಂದುವರೆದಿದ್ದವು. ಕೊಪ್ಪಳ ಬಂದ್ ಮುಷ್ಕರದ ಪರಿಣಾಮವಾಗಿ ಮಾನ್ಯ ಮುಖ್ಯಮಂತ್ರಿಗಳು ಭಾಗಿಯಾಗಿ ಕಾರ್ಖಾನೆಯ ಕಾರ್ಯಗಾರವನ್ನು ರದ್ದುಗೊಳಿಸಲು ಸೂಚಿಸಿದ್ದರು, ನಂತರ ಈಗ ಕಾರ್ಯಾಗಾರವನ್ನು ನಿಲ್ಲಿಸಲಾಗಿದೆ. ಆದರೆ ಕಾರ್ಖಾನೆ ಅಧಿಕಾರಿಗಳು ಇವೆಲ್ಲವೂ ಕೂಡ ಹಳ್ಳಿಗಳ ಆರ್ಥಿಕ ಸ್ವಾವಲಂಬನೆ ಮತ್ತು ಬೆಳವಣಿಗೆಗೋಸ್ಕರ ಎಂದು ತೋರಿಸುತ್ತಿವೆ. ಇದರಿಂದ ವಿಶೇಷ ಆರ್ಥಿಕ ವಲಯ ನಿರ್ಮಾಣ ಹೆಚ್ಚು ಆಗಬಹುದು. ಈಗಾಗಲೇ ಕೊಪ್ಪಳ ಜಿಲ್ಲೆಯು ಶೇ.50 ಪ್ರತಿಶತದಷ್ಟು ಟಾಯ್ ಸಿಟಿ ಹಾಗೂ ಬಳ್ಳಾರಿ, ರಾಯಚೂರು ಮತ್ತು ಕೊಪ್ಪಳ ಜಿಲ್ಲೆಯಲ್ಲಿರುವ ಸ್ಟೀಲ್ ಇಂಡಸ್ಟ್ರಿಗಳಿಂದ ಕೂಡಿಕೊಂಡು ವಿಶೇಷ ಆರ್ಥಿಕ ವಲಯ ಎಂದು ಪರಿಗಣಿಸಲಾಗಿದೆ. ಈಗ ಸ್ಟೀಲ್ ಕಾರ್ಖಾನೆಯಾದ ಬಿ.ಎಸ್.ಪಿ.ಎಲ್ ಕೂಡಾ ಇಲ್ಲಿ ಬಂದರೆ. ಈ ಜಿಲ್ಲೆಯನ್ನು ಶೇ.100 ಪ್ರತಿಶತದಷ್ಟು ವಿಶೇಷ ಆರ್ಥಿಕ ವಲಯಕ್ಕೆ ಸೇರಿಸುವ ಅವಕಾಶಗಳು ಹೆಚ್ಚು.

**ಹಾಗಾದರೆ ವಿಶೇಷ ಆರ್ಥಿಕ ವಲಯ ಎಂದರೇನು?**

ವಿಶೇಷ ಆರ್ಥಿಕ ವಲಯ ಎಂದರೆ ಒಂದು ದೇಶದೊಳಗೆ ನಿರ್ದಿಷ್ಟ ಪ್ರವೇಶವನ್ನು ಹೆಚ್ಚುವರಿ ಆರ್ಥಿಕ ಮುಂಬಡ್ತಿ ಮಾಡುವಲ್ಲಿನ ಪರಿಕಲ್ಪನೆ ಮತ್ತು ಅದನ್ನು ನಿರ್ವಹಿಸುವ ಒಂದು ಕ್ಷೇತ್ರ ಎಂದರ್ಥ. ಇದು ಸಾಮಾನ್ಯವಾಗಿ ವಿದೇಶಿ ವಿನಿಮಯವನ್ನು ಹೆಚ್ಚಿಸಲು, ವಿದೇಶಿ ಬಂಡವಾಳ ಶಾಹಿಗಳನ್ನು ಆಕರ್ಷಿಸಲು ಮಾಡುವ ಒಂದು ವಿಧಾನ. ಇದರಿಂದಾಗುವ ಪ್ರಯೋಜನಗಳೆಂದರೆ ಕಂಪನಿಗಳಿಗೆ ತೆರಿಗೆಯಲ್ಲಿನ ಸಡಲಿಕೆ, ಉದ್ಯೋಗವಕಾಶಗಳನ್ನು ಸೃಷ್ಟಿಸುವ ಒಂದು ವಿಧಾನ ಮತ್ತು ಇಲ್ಲಿಯ ಜನರು ಬೇರೆ ರಾಜ್ಯ ಅಥವಾ ದೇಶಕ್ಕೆ ಕೆಲಸ ಹುಡುಕಿಕೊಂಡು ಹೋಗುವುದನ್ನು ತಡೆಯಲು ಇಲ್ಲಿಯ ಸರ್ಕಾರವು ಪ್ರತಿಯೊಂದು ಮೂಲ ಸೌಕರ್ಯಗಳನ್ನು ಕಾರ್ಖಾನೆಗಳಿಗೆ ಅಥವಾ ಕೈಗಾರಿಕೆಕರಣಕ್ಕೆ ಒದಗಿಸುತ್ತದೆ.

**ಹಾಗಾದರೆ ವಿಶೇಷ ಆರ್ಥಿಕ ವಲಯದಿಂದಾಗುವ ಪರಿಣಾಮಗಳೇನು?**

ವಿಶೇಷ ಆರ್ಥಿಕ ವಲಯದಲ್ಲಿ ಎರಡು ರೀತಿಯ ಸಮಾಜವನ್ನು ನಾವು ಕಾಣಬಹುದು. ಒಂದು ಹಳ್ಳಿಗಳ ಆರ್ಥಿಕ ಬೆಳವಣಿಗೆ ಹಾಗೂ ಸಾರಿಗೆ ಸಂಪರ್ಕ, ಶಾಲೆ ಮತ್ತು ಆಸ್ಪತ್ರೆಗಳ ನಿರ್ಮಾಣವಾಗುತ್ತದೆ. ಇನ್ನೊಂದಡೆಗೆ ಸರ್ಕಾರ ನೀಡುವ ಬಜೆಟ್ನಲ್ಲಿ ವಿಶೇಷ ಆರ್ಥಿಕ ವಲಯದಲ್ಲಿ ಕಡಿಮೆ ಪ್ರಮಾಣದ ಪಾಲು ಮಾತ್ರ ಸಿಗುತ್ತದೆ, ಮಿಕ್ಕಿದ್ದೆಲ್ಲ ನಗರೀಕರಣಕ್ಕೆ ಸೇರುತ್ತದೆ. ಕಾರ್ಖಾನೆಗಳು ಕಾರ್ಪೊರೇಟ್ ಸೋಶಿಯಲ್ ರೆಸ್ಪೋನ್ಸಿಬಿಲಿಟಿ ಅಡಿಯಲ್ಲಿ ಹಳ್ಳಿಗಳಿಗೋಸ್ಕರ ಎಷ್ಟು ಕೆಲಸ ಮಾಡುತ್ತದೆಯೋ ಅದನ್ನು ಮಾತ್ರ ಸ್ವೀಕರಿಸಿ ಬದುಕುವ ಅನಿವಾರ್ಯ ಉಂಟಾಗುತ್ತದೆ. ಇದೆಲ್ಲವೂ ನಮ್ಮದೇ ರೈತರ ಭೂಮಿಯನ್ನು ಸಾರಿಗೆ ಸೌಲಭ್ಯ, ಶಾಲೆ ಮತ್ತು ಆಸ್ಪತ್ರೆಗೆ, ಕಾರ್ಖಾನೆಯನ್ನು ಸ್ಥಾಪಿಸಲು ರೈತರ ಮಕ್ಕಳ ಉದ್ಯೋಗಾವಕಾಶದ ಭವಿಷ್ಯವನ್ನು ಆಮಿಷವ ನ್ನೊಡ್ಡಿ ಕಡಿಮೆ ದರದಲ್ಲಿ ಖರೀದಿಸಿರುತ್ತಾರೆ. ಶಾಲೆ ಹಾಗೂ ಆಸ್ಪತ್ರೆ ನಿರ್ಮಾಣ ಅವಶ್ಯ ಸರಿ, ಆದ್ರೆ ಕಾಲಕ್ರಮೇಣ ಅದೇ ಕಾರ್ಖಾನೆಯಲ್ಲಿ ರೈತರೇ ಕೂಲಿಗಾಗಿ ಕೆಲಸ ಮಾಡುವ ಪರಿಸ್ಥಿತಿ ಬರುತ್ತದೆ. ಏಕೆಂದರೆ ಮಕ್ಕಳ ಉದ್ಯೋಗವಕಾಶ ಗೋಸ್ಕರ ಅವರನ್ನು ಬೇರೆ ಊರಿಗೆ ಓದಲು ಕಳುಹಿಸಿ ಕೊಟ್ಟಿರುತ್ತಾರೆ. ಆ ಮಕ್ಕಳು ಬರುವಷ್ಟರಲ್ಲಿ ಅಲ್ಲಿ ಯಾವುದೇ ಕೆಲಸ ಖಾಲಿ ಇರುವುದಿಲ್ಲ. ಆಗ ರೈತರು ಇವರಿಗೋಸ್ಕರ ತಮ್ಮ ಭೂಮಿ ಮತ್ತು ಮನೆಯನ್ನು ಕಳೆದುಕೊಂಡು, ಬಾಡಿಗೆ ಮನೆಯಲ್ಲಿ ವಾಸಿಸುವಂತಹ ಪರಿಸ್ಥಿತಿ ಎದುರಾಗುತ್ತದೆ., ಇಷ್ಟೇ ಅಲ್ಲದೆ ವಸ್ತುಗಳನ್ನು ತರಕಾರಿ ಹಾಗೂ ಆಹಾರ ಪದಾರ್ಥಗಳನ್ನು ಸರ್ಕಾರ ಆಮದು ಪಡೆದುಕೊಂಡ ನಂತರ ದರವನ್ನು ನಿಗದಿಪಡಿಸಿ ಮಾರುತ್ತಾರೆ. ಆ ದರವು ಎಲ್ಲರಿಗೂ ಸಮಾನವಾಗಿರುತ್ತದೆ. ಆದರೆ ಭೂಮಿಯನ್ನು ಕಳೆದುಕೊಂಡ ರೈತರಿಗೆ ಈ ದರವು ಕೈಗೆಟುಕುವಂತೆ ಇರೋದಿಲ್ಲ. ಇದರಿಂದ ಮಕ್ಕಳಿಗೆ ಉದ್ಯೋಗಾವಕಾಶವೂ ಇಲ್ಲ ಕೈಗೆಟುಕುವ ದರದಲ್ಲಿ ಪದಾರ್ಥಗಳು ಸಿಗುವುದಿಲ್ಲ ಕೂಲಿ ಮಾಡಿದರು ಬದುಕಲಾಗದ ಪರಿಸ್ಥಿತಿ ಎದುರಿಸಬೇಕಾಗುತ್ತದೆ. ಯಾವ ಸರ್ಕಾರವು ಒಂದು ಸಮಯದಲ್ಲಿ ರೈತರ ಮಕ್ಕಳಿಗಾಗಿ ಉದ್ಯೋಗವ ಕಾಶಗಳನ್ನು ಸೃಷ್ಟಿಸಲು ಕಾರ್ಖಾನೆಗಳನ್ನು ಸ್ಥಾಪಿಸಿತ್ತೋ ಮತ್ತು ಉದ್ಯೋಗಾವ ಕಾಶಗಳನ್ನು ಹುಡುಕಿ ಕೊಂಡು ಬೇರೆ ದೇಶಗಳಿಗೆ ಹೋಗುವಂತೆ ಮಾಡಿ ದಂತಾಯಿತು.

ಇನ್ನು ಎಂಎಸ್ಎಮ್‌ಗಳು ಕೂಡ ಕಡಿಮೆಯಾಗುತ್ತವೆ ಇದರಿಂದ ಕಾರ್ಖಾನೆಯಲ್ಲಿ ಜನರು ಕೂಲಿ ಕೆಲಸ ಮಾಡುವಂತಹ ಸಂದರ್ಭ ಬರುತ್ತದೆ. ಹಾಗಾಗಿ ಕೊಪ್ಪಳ ಮತ್ತು ವಿಜಯನಗರ ಜಿಲ್ಲೆಯ ಜನರು ಬೇಗನೆ ಎಚ್ಚೆತ್ತುಕೊಳ್ಳುವುದು ಅನಿವಾರ್ಯ. ನಿರ್ಜಲೀಕರಣ ಪರಿಸರ ಮಾಲಿನ್ಯ ದಿಂದಾಗುವ ದುಷ್ಪರಿಣಾಮಗಳನ್ನು ಎದುರಿಸುವದು ಬೇಡ. ಇದರಿಂದಾಗಿ ಜನ ಸಾಮಾನ್ಯರಲ್ಲಿ ಅಸಮಾನತೆ ಉಂಟಾಗುತ್ತದೆ. ಹಾಗೂ



ಸರ್ಕಾರವು ಬರುವ ಆದಾಯವನ್ನು ಜನಸಾಮಾನ್ಯರಲ್ಲಿ ಸರಿಯಾಗಿ ಹಂಚಿಕೆಯಾಗುವ ರೀತಿಯಲ್ಲಿ ವಿಶೇಷ ಆರ್ಥಿಕ ವಲಯದಲ್ಲಿ ಮುನ್ನಡೆಯಲಾ ಗುವುದಿಲ್ಲ! ಹಾಗಾಗಿ ನಗರೀಕರಣ ಮತ್ತು ಕೈಗಾರಿಕೆಕರಣಕ್ಕೆ ಒತ್ತು ಕೊಡದೆ ಸರ್ಕಾರವು ರೈತರಿಗೆ ಬೆನ್ನೆಲುಬಾಗಿ ಮತ್ತು ಅವರ ಮಕ್ಕಳಿಗೆ ಶಿಕ್ಷಣ ಉದ್ಯೋಗಾವಕಾಶವನ್ನು ಸೃಷ್ಟಿಸಿ ಇಲ್ಲಿಯೇ ಅವರನ್ನು ನಮ್ಮ ದೇಶದ ಬೆನ್ನೆಲುಬಾಗಿಯೇ ಉಳಿಸಿಕೊಂಡು ಸಮಾನತೆಯನ್ನು ಕಾಪಾಡಿಕೊಳ್ಳುವುದರ ಬಗೆಗೆ ಆದ್ಯತೆ ನೀಡಬೇಕಾಗಿದೆ ಎಂಬುದು ಈ ಭಾಗದ ಜನರ ಅಭಿಮತವಾಗಿದೆ.


ಹಂಪಿ ಟೈಮ್ಸ್ SSLC ಮಾರ್ಗದರ್ಶಿ
ಇ-ಪೇಪರ್‌ನಲ್ಲೂ ಲಭ್ಯ
ಕೆಳಗಿನ ವಿಳಾಸಕ್ಕೆ ಭೇಟಿ ನೀಡಿ..
www.hampitimes.com
epaper.hampitimes.com

## ನಿತ್ಯ ಪಂಚಾಂಗ

ಮಾಸ: ಫಾಲ್ಗುಣ । ಸಂವತ್ಸರ: ಕ್ರೋಧಿ

**18-03-2025 – ಮಂಗಳವಾರ**

| | |
|---|---|
| ತಿಥಿ | : ಚತುರ್ಥಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಸ್ವಾತಿ |
| ಯೋಗ | : ವ್ಯಾಘಾತ |
| ಕರಣ | : ಭವ |
| ಸೂರ್ಯೋದಯ | : 06:34:04 |
| ಸೂರ್ಯಾಸ್ತ | : 18:36:02 |
| ರಾಹು ಕಾಲ | : 15:36–17:06 |
| ಯಮಘಂಡ ಕಾಲ | : 09:35–11:05 |
| ಗುಳಿಕ ಕಾಲ | : 12:35–14:05 |



## ತುಂಗಭದ್ರಾ ನೀರಿನ ಮಟ್ಟ

ಸೋಮವಾರ : 17–03–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1599.98 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 7072 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 21.495 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1583.32 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 2199 ಕ್ಯುಸೆಕ್ |
| ಸಾಮರ್ಥ್ಯ | 6.279 ಟಿಎಂಸಿ |

# ಜೋಡು ರಥೋತ್ಸವ ನಿರ್ಮಾಣಕ್ಕೆ ಮುಸ್ಲಿಂ ಸಮುದಾಯದಿಂದ ದೇಣಿಗೆ



> ಈ ದೇಣಿಗೆ ಎರಡು ಸಮುದಾಯಗಳ ನಡುವಿನ ಸಾಮರಸ್ಯ, ಸಹೋದರತ್ವಕ್ಕೆ ಹಾಗು ಮುಂದಿನಪೀಳಿಗೆಗೆ ಏಕತೆಯ ಸಾಕ್ಷಿಯಾಗಲಿದೆ.
> –ಎಂ.ವಿಶ್ವನಾಥಶೆಟ್ಟಿ, ಮಾಜಿಪ್ರಧಾನರು.

> ನಾಣಿಕೇರಿಯ ಮೂಲ ಪರಂಪರೆಯಂತೆ ನಮ್ಮೂರಲ್ಲಿ ಸೌಹಾರ್ದತೆ ಮುಂದುವರೆದಿದೆ, ರಥೋತ್ಸವದ ಸಂಭ್ರಮ ಈಗ ಊರಲ್ಲಿ ಇಮ್ಮಡಿಸಿದೆ. ಎಲ್ಲ ಸಮುದಾಯದವರು ಒಟ್ಟಿಗೆ ನೂತನ ರಥಗಳನ್ನು ಎಳೆಯೋಣ, ನಾಡಿಗೆ ಮಾದರಿ ಯಾಗೋಣ
> –ಎನ್.ಎಸ್.ಬುಡೇನ್ ಸಾಬ್, ಆದಿಮನಿಹುಸೇನ್ ಭಾಷ, ಅಧ್ಯಕ್ಷರು,ಪ.ಪಂ.

■ ಹಂಪಿ ಟೈಮ್ಸ್ ಮರಿಯಮ್ಮನಹಳ್ಳಿ

ಪಟ್ಟಣದ ಆರಾಧ್ಯದೈವಗಳಾದ ಶ್ರೀಲಕ್ಷ್ಮಿ ನಾರಾಯಣ ಸ್ವಾಮಿ, ಶ್ರೀ ಆಂಜನೇಯ ಸ್ವಾಮಿಗಳ ಜೋಡು ರಥಗಳ ನಿರ್ಮಾಣಕ್ಕೆ ಕೋಮು ಸೌಹಾರ್ದತೆಗೆ ಸಾಕ್ಷಿಯಾಗಿ ಪಟ್ಟಣದ ಮುಸ್ಲಿಂ ಸಮಾಜವು ದೇಣಿಗೆಯನ್ನು ನೀಡಿದೆ.

ಇಲ್ಲಿನ ಮುಸ್ಲಿಂ ಸಮುದಾಯದವರು ಸಹ ಉಭಯಸ್ವಾಮಿಗಳ ರಥಗಳ ನಿರ್ಮಾಣಕ್ಕೆ 2,80,150ರೂ.ಗಳನ್ನು ದೇವಸ್ಥಾನ ಅಭಿವೃದ್ಧಿಸಮಿತಿಗೆ ದೇಣಿಗೆಯಾಗಿ ನೀಡಿ ಸೌಹಾರ್ದತೆ ಮೆರೆದಿದ್ದಾರೆ. ಜೋಡಿರಥಗಳು ಶಿಥಿಲಗೊಂಡ ಪರಿಣಾಮವಾಗಿ, ದೇವಸ್ಥಾನದ ಅಭಿವೃದ್ಧಿ ಸಮಿತಿಯು ಜೋಡುರಥಗಳ ನಿರ್ಮಾಣ, ದೇವಸ್ಥಾನದ ನವೀಕರಣ ಕೈಗೊಂಡ ಹಿನ್ನೆಲೆಯಲ್ಲಿ ಭಕ್ತರಿಂದ ದೇಣಿಗೆಯ ಮಹಾಪೂರವೇ ಹರಿದು ಬರುತ್ತಿದೆ. ಇದರೊಂದಿಗೆ ಮುಸ್ಲಿಂ ಸಮುದಾಯದವರು ಕೈಜೋಡಿಸಿರುವುದು ಸ್ನೇಹ, ಪ್ರೀತಿಯ ಜೊತೆಗೆ ಸೌಹಾರ್ದತೆಯ ಸಂಕೇತವಾಗಿ ಹೊರಹೊಮ್ಮಿದೆ.

ಈ ಸಂಧರ್ಭದಲ್ಲಿ ಸಮಾಜದ ಮುಖಂಡರಾದ ಎನ್.ಎಸ್.ಬುಡೇನ್ ಸಾಬ್, ಮುತ್ತಾವಲಿ ಫಕ್ರುಸಾಬ್, ಪ.ಪಂ.ಅಧ್ಯಕ್ಷ ಆದಿಮನಿಹುಸೇನ್ ಬಾಷ, ಪ.ಪಂ.ಸದಸ್ಯ ಎಸ್.ಮಹಮದ್, ದೇವಸ್ಥಾನ ಅಭಿವೃದ್ಧಿ ಸಮಿತಿಯ ಚಿದ್ರಿಸತೀಶ್, ಗೋವಿಂದರಪರಶುರಾಮ, ಜಿ.ಸತ್ಯನಾರಾಯಣಶೆಟ್ಟಿ, ವಿಶ್ವನಾಥ, ರೆಡ್ಡಿಮಾಬುಸಾಬ್, ಖಾಜಮೋದೀನ್, ಹೊನ್ನೂರಲಿ, ಐ.ಪರಮೇಶ್ವರಪ್ಪ ಸೇರಿದಂತೆ ಇತರರಿದ್ದರು.

## ಪರೀಕ್ಷಾ ಕೇಂದ್ರಗಳ ಸುತ್ತ 200 ಮೀ. ವ್ಯಾಪ್ತಿ ನಿಷೇಧಾಜ್ಞೆ ಜಾರಿ

■ ಹಂಪಿ ಟೈಮ್ಸ್ ಬಳ್ಳಾರಿ

ನಗರದ 03 ಪರೀಕ್ಷಾ ಕೇಂದ್ರಗಳಲ್ಲಿ ಮಾ.18 ರಿಂದ 21 ರ ವರೆಗೆ ಲೋಕೋಪಯೋಗಿ ಇಲಾಖೆಯ ಹೈದರಾಬಾದ್ ಕರ್ನಾಟಕ ವೃಂದದ ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ಗ್ರೇಡ್-1) ಗ್ರೂಪ್-ಎ ವೃಂದದ ಹುದ್ದೆಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳು ನಡೆಯಲಿದ್ದು, ಪರೀಕ್ಷಾ ಕೇಂದ್ರಗಳ ಸುತ್ತಲೂ 200 ಮೀಟರ್ ಆವರಣವನ್ನು ಭಾರತೀಯ ನಾಗರಿಕ ಸುರಕ್ಷಾ ಸಂಹಿತಾ 2023 ರ ಕಲಂ 163 ಮೇರೆಗೆ ನಿರ್ಬಂಧಿತ ಪ್ರದೇಶವೆಂದು ಘೋಷಿಸಿ ಜಿಲ್ಲಾ ದಂಡಾಧಿಕಾರಿಯೂ ಆಗಿರುವ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಆದೇಶಿಸಿದ್ದಾರೆ.

ಪರೀಕ್ಷಾ ಕೇಂದ್ರಗಳ ಸುತ್ತಲೂ 200 ಮೀಟರ್ ಆವರಣದಲ್ಲಿನ ಜೆರಾಕ್ಸ್ ಸೆಂಟರ್ ಮತ್ತು ಇಂಟರ್‌ನೆಟ್ ಸೆಂಟರ್‌ಗಳನ್ನು ಕಾರ್ಯನಿರ್ವಹಿಸದಂತೆ ಪ್ರತಿಬಂಧಿಸಿ ಆದೇಶಿಸಿದ್ದಾರೆ.

ಆ ಪ್ರದೇಶದಲ್ಲಿ ಅನಧಿಕೃತ ವ್ಯಕ್ತಿ ಮತ್ತು ವ್ಯಕ್ತಿಗಳ ಗುಂಪುಗಳಿಗೆ ಪ್ರವೇಶವನ್ನು ನಿಷೇಧಿಸಿದೆ. ಈ ಆದೇಶವು ಪರೀಕ್ಷೆಯ ಮೇಲ್ವಿಚಾರಣೆ ಕಾರ್ಯನಿರ್ವಹಿಸುವ ಸಿಬ್ಬಂದಿಗಳಿಗೆ ಅನ್ವಯಿಸುವುದಿಲ್ಲ ಎಂದು ಅವರು ಹೊರಡಿಸಿರುವ ಆದೇಶದಲ್ಲಿ ತಿಳಿಸಿದ್ದಾರೆ.

## ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ : ಅರ್ಜಿ ಆಹ್ವಾನ

■ ಹಂಪಿ ಟೈಮ್ಸ್ ಬಳ್ಳಾರಿ

ಜಿಲ್ಲೆಯಲ್ಲಿನ ಪರಿಶಿಷ್ಟ ವರ್ಗದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ 2025-26ನೇ ಸಾಲಿಗೆ ಜನಸೇವಾ ವಿದ್ಯಾಕೇಂದ್ರ (ರಿ) ಆಂಗ್ಲ ಮತ್ತು ಕನ್ನಡ ಮಾಧ್ಯಮ ಶಾಲೆ, ಮಾಗಡಿ ರಸ್ತೆ, ಚೆನ್ನನಹಳ್ಳಿ, ಬೆಂಗಳೂರು ಇಲ್ಲಿಗೆ ಪ್ರವೇಶ ಪಡೆಯಲು ಅರ್ಜಿ ಆಹ್ವಾನಿಸಲಾಗಿದೆ.

5ನೇ ತರಗತಿ ಕನ್ನಡ ಮಾಧ್ಯಮ ಮತ್ತು 8ನೇ ತರಗತಿ ಕನ್ನಡ, ಆಂಗ್ಲ ಮಾಧ್ಯಮ ತರಗತಿ ದಾಖಲಾತಿಗೆ ಏ.06 ರಂದು ಪ್ರವೇಶ ಪರೀಕ್ಷೆ ನಡೆಯಲಿದೆ.

ಪ್ರವೇಶ ಪರೀಕ್ಷೆ ಬರೆಯಲು ಇಚ್ಛಿಸುವ ಪರಿಶಿಷ್ಟ ವರ್ಗದ ಅರ್ಹ ವಿದ್ಯಾರ್ಥಿಗಳು ಅರ್ಜಿಗಳನ್ನು ಬಳ್ಳಾರಿ, ಸಂಡೂರು, ಸಿರುಗುಪ್ಪ, ತಾಲ್ಲೂಕುಗಳ ಪರಿಶಿಷ್ಟ ವರ್ಗಗಳ ಕಲ್ಯಾಣಧಿಕಾರಿಗಳ ಕಚೇರಿಯಲ್ಲಿ ಪಡೆದುಕೊಳ್ಳಬಹುದು. ಅರ್ಜಿ ಸಲ್ಲಿಸಲು ಮಾ.26 ಕೊನೆಯ ದಿನವಾಗಿದೆ. ಹೆಚ್ಚಿನ ಮಾಹಿತಿಗಾಗಿ ನಗರದ ನಲ್ಲಚೇರುವು ಪ್ರದೇಶದ ವಾಲ್ಮೀಕಿ ಭವನದ ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಧಿಕಾರಿಗಳ ಕಚೇರಿ ಅಥವಾ ದೂ.08392-242453 ಗೆ ಸಂಪರ್ಕಿಸಬಹುದು ಎಂದು ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಧಿಕಾರಿ ದಿವಾಕರ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## SSLC ಈ ಬಾರಿ ಫಲಿತಾಂಶ ನಮ್ಮದೆ ಹೈಸ್ಕೋರ್‌ಗೆ

HAMPI TIMES MARGADARSHI

ಈವರೆಗೆ ಓದಿದ್ದನ್ನು ಪುನರ್‌ಮನನ ಮಾಡಿ

ಪರೀಕ್ಷೆ ಮಾರ್ಚ್ 21 ರಿಂದ

ಮನಸ್ಸು ಮಾಡು-ಕರ್ತವ್ಯ ನಿಷ್ಠನಾಗು-ಕಾದು ನೋಡು

https://epaper.hampitimes.com

ನಿನ್ನ ಏಳಿಗೆಗೆ ನೀನೆ ಶಿಲ್ಪಿ

ಹಂಪಿ ಟೈಮ್ಸ್ ಮಾರ್ಗದರ್ಶಿ SSLC : ಕನ್ನಡ

### 10ನೇ ತರಗತಿ: ಕನ್ನಡ ಪ್ರಥಮ ಭಾಷೆ

**ಸಾರ್ವತ್ರಿಕ ಪರೀಕ್ಷೆಯಲ್ಲಿ ಕೇಳಲಾದ ಬಹು ಆಯ್ಕೆ ಮತ್ತು ಸಂಬಂಧೀ ಪದ ಪ್ರಶ್ನೆಗಳು ಕೊಟ್ಟಿರುವ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಆಯ್ಕೆಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ.**

**1. 'ದಿಗಂತ' ಪದವು ಈ ಸಂಧಿಗೆ ಉದಾಹರಣೆಯಾಗಿದೆ;**
(ಎ) ಗುಣ ಸಂಧಿ (ಬಿ) ಜಶ್ತ್ವ ಸಂಧಿ
(ಸಿ) ವೃದ್ಧಿ ಸಂಧಿ (ಡಿ) ಶ್ಚುತ್ವ ಸಂಧಿ
**ಉತ್ತರ : (ಬಿ) ಜಶ್ತ್ವ ಸಂಧಿ**

**2. ಒಂದು ಪದವನ್ನೋ ವಾಕ್ಯವನ್ನೋ ಹೇಳಿ, ಅದಕ್ಕೆ ಸಮಾನಾರ್ಥಕ ಪದವನ್ನೋ ವಾಕ್ಯವನ್ನೋ ಹೇಳುವಾಗ ಬಳಸುವ ಲೇಖನ ಚಿಹ್ನೆ;**
(ಎ) ಉದ್ಧರಣ ಚಿಹ್ನೆ (ಬಿ) ವಾಕ್ಯವೇಷ್ಠನ ಚಿಹ್ನೆ
(ಸಿ) ಆವರಣ ಚಿಹ್ನೆ (ಡಿ) ವಿವರಣಾತ್ಮಕ ಚಿಹ್ನೆ
**ಉತ್ತರ : (ಸಿ) ಆವರಣ ಚಿಹ್ನೆ**

**3. 'ಬೆಟ್ಟದಾವರೆ' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ;**
(ಎ) ತತ್ಪುರುಷ ಸಮಾಸ (ಬಿ) ದ್ವಿಗು ಸಮಾಸ
(ಸಿ) ಅಂಶಿ ಸಮಾಸ (ಡಿ) ಕ್ರಿಯಾ ಸಮಾಸ
**ಉತ್ತರ : (ಎ) ತತ್ಪುರುಷ ಸಮಾಸ**

**4. 'ಮಾಡು' ಧಾತುವಿನ ವಿಧ್ಯರ್ಥಕ ರೂಪ;**
(ಎ) ಮಾಡೇವು (ಬಿ) ಮಾಡಿಯಾರು
(ಸಿ) ಮಾಡರು (ಡಿ) ಮಾಡಲಿ
**ಉತ್ತರ : (ಡಿ) ಮಾಡಲಿ**

**5. 'ಸಾವಿತ್ರಿಗೆ' ಪದದಲ್ಲಿರುವ ವಿಭಕ್ತಿ;**
(ಎ) ಪ್ರಥಮಾ (ಬಿ) ದ್ವಿತೀಯಾ
(ಸಿ) ತೃತೀಯಾ (ಡಿ) ಚತುರ್ಥೀ
**ಉತ್ತರ : (ಡಿ) ಚತುರ್ಥೀ**

**6. 'ಧಗಧಗ' ಪದವು ಈ ಅವ್ಯಯಕ್ಕೆ ಸೇರಿದೆ;**
(ಎ) ಸಾಮಾನ್ಯಾರ್ಥಕಾವ್ಯಯ (ಬಿ) ಅನುಕರಣಾವ್ಯಯ
(ಸಿ) ಭಾವಸೂಚಕಾವ್ಯಯ (ಡಿ) ಕ್ರಿಯಾರ್ಥಕಾವ್ಯಯ
**ಉತ್ತರ : (ಬಿ) ಅನುಕರಣಾವ್ಯಯ**

**7. ಸಜಾತೀಯ ಸಂಯುಕ್ತಾಕ್ಷರಕ್ಕೆ ಉದಾಹರಣೆಯಾದ ಪದವಿದು;**
(ಎ) ಶಸ್ತ್ರ (ಬಿ) ಎಚ್ಚರ
(ಸಿ) ಅದ್ಭುತ (ಡಿ) ಅಕ್ಷರ
**ಉತ್ತರ : (ಬಿ) ಎಚ್ಚರ**

**8. 'ದೇವೇಂದ್ರ' ಪದವು ಈ ಸಂಧಿಗೆ ಉದಾಹರಣೆಯಾಗಿದೆ;**
(ಎ) ಲೋಪ ಸಂಧಿ (ಬಿ) ಆಗಮ ಸಂಧಿ
(ಸಿ) ಗುಣ ಸಂಧಿ (ಡಿ) ಆದೇಶ ಸಂಧಿ
**ಉತ್ತರ : (ಸಿ) ಗುಣ ಸಂಧಿ**

**9. ಸ್ವತಂತ್ರವಾಕ್ಯಗಳಾಗಿ ನಿಲ್ಲಬಲ್ಲ ಅನೇಕ ಉಪವಾಕ್ಯಗಳೊಡನೆ ಒಂದು ಪೂರ್ಣಾಭಿಪ್ರಾಯದ ವಾಕ್ಯವಾಗಿದ್ದರೆ ಅದು;**
(ಎ) ಸಾಮಾನ್ಯವಾಕ್ಯ (ಬಿ) ಮಿಶ್ರವಾಕ್ಯ
(ಸಿ) ಪ್ರಶ್ನಾರ್ಥಕವಾಕ್ಯ (ಡಿ) ಸಂಯೋಜಿತವಾಕ್ಯ
**ಉತ್ತರ : (ಡಿ) ಸಂಯೋಜಿತವಾಕ್ಯ**

**10. ಷಷ್ಠೀ ವಿಭಕ್ತಿಯ ಕಾರಕಾರ್ಥ;**
(ಎ) ಸಂಬಂಧ (ಬಿ) ಅಧಿಕರಣ
(ಸಿ) ಸಂಪ್ರದಾನ (ಡಿ) ಅಪಾದಾನ
**ಉತ್ತರ : (ಎ) ಸಂಬಂಧ**

**11. 'ವ್ಯಾಪಾರಿ' ಪದವು ನಾಮಪದದ ಈ ಗುಂಪಿಗೆ ಸೇರಿದೆ;**
(ಎ) ಭಾವನಾಮ (ಬಿ) ರೂಢನಾಮ
(ಸಿ) ಅನ್ವರ್ಥನಾಮ (ಡಿ) ಅಂಕಿತನಾಮ
**ಉತ್ತರ : (ಸಿ) ಅನ್ವರ್ಥನಾಮ**

**12. ಒಬ್ಬರು ಹೇಳಿದ ಮಾತನ್ನೇ ಯಥಾವತ್ತಾಗಿ ಬರೆಯುವಾಗ ಬಳಸುವ ಲೇಖನ ಚಿಹ್ನೆ;**
(ಎ) ಉದ್ಧರಣ ಚಿಹ್ನೆ (ಬಿ) ಆವರಣ ಚಿಹ್ನೆ
(ಸಿ) ಭಾವಸೂಚಕ ಚಿಹ್ನೆ (ಡಿ) ವಾಕ್ಯವೇಷ್ಠನ ಚಿಹ್ನೆ
**ಉತ್ತರ : (ಎ) ಉದ್ಧರಣ ಚಿಹ್ನೆ**

**ಕೊಟ್ಟಿರುವ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧ ಹೊಂದುವ ಸಂಬಂಧೀ ಪದವನ್ನು ಬರೆಯಿರಿ.**

1. ವರ್ಗೀಯ ವ್ಯಂಜನಾಕ್ಷರಗಳು: 25 : :ಅವರ್ಗೀಯ ವ್ಯಂಜನಾಕ್ಷರಗಳು : 9
2. ಹಾಲ್ಜೇನು : ಜೋಡುನುಡಿ : : ಬೇಡಬೇಡ : ದ್ವಿರುಕ್ತಿ
3. ಪರ್ವತ : ರೂಢನಾಮ : : ಧರ್ಮರಾಯ : ಅಂಕಿತನಾಮ
4. ಮ್ಯಾಗ : ಮೇಲೆ : : ಸಕ್ಕಾರಿ : ಸಕ್ಕರೆ
5. ಕಟ್ಟಕಡೆಗೆ : ದ್ವಿರುಕ್ತಿ : : ಹುಳಹುಪ್ಪಡಿ : ಜೋಡುನುಡಿ
6. ಸ್ಥಾನ : ತಾಣ : : ವಂಧ್ಯಾ : ಬಂಜೆ
7. ಆ ಕಲ್ಲು : ಗಮಕ ಸಮಾಸ : : ಕಣ್ದೆರೆ : ಕ್ರಿಯಾ ಸಮಾಸ
8. ಮಾಡೋಣ : ವಿಧ್ಯರ್ಥಕ : : ಮಾಡರು : ನಿಷೇಧಾರ್ಥಕ

www.hampitimes.com - Hampi Times Margadarshi

**ನಿರಂತರ ಪ್ರಯತ್ನ, ಸ್ಮಾರ್ಟ್ ರಿವಿಷನ್, ಆತ್ಮವಿಶ್ವಾಸ ಗರಿಷ್ಠ ಅಂಕ ಗಳಿಸಲು ಸಹಕಾರಿ. ಧನಾತ್ಮಕವಾಗಿ ಆಲೋಚಿಸಿ, ನಿಮ್ಮ ಮೇಲೆ ನಿಮಗೆ ನಂಬಿಕೆ ಇರಲಿ**

ಮಾರ್ಗದರ್ಶಿ ಶಿಕ್ಷಕರು : ಶ್ರೀ ಮಧು. ಕೆ. ಕನ್ನಡ ಭಾಷಾ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ ಸೂಲದಹಳ್ಳಿ, ಕೂಡ್ಲಿಗಿ (ತಾ)

ಸಾಯಿಮಣಿ ಪ್ರಕಾಶನ, ಹೊಸಪೇಟೆ